MANUVIKASA

# ಮನುವಿಕಾಸ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾಪತ್ರ

ಖಾಸಗಿ ಪ್ರಚಾರಕ್ಕಾಗಿ ಮಾತ್ರ

ಸಂಪಾದಕರು: ಗಣಪತಿ ಭಟ್ಟ

ಸಂಪಾದಕೀಯ ಮಂಡಳಿ: ಶುಭಾ ಪೈ, ಗಣಪತಿ ಹೆಗಡೆ, ಗಣೇಶ ಹೆಗಡೆ

ಸಂಚಿಕೆ: 7 ಸಂಪುಟ: 10




## ಶಿರಸಿಯಲ್ಲಿ ಮನುವಿಕಾಸ ಸಂಸ್ಥೆಯಿಂದ ಬೃಹತ್ ಮಹಿಳಾ ಸಮಾವೇಶ

ಮನುವಿಕಾಸ ಸಂಸ್ಥೆಯು ಈಡಲ್ ಗಿವ್ ಫೌಂಡೇಶನ್‌ನ ಸಹಯೋಗದೊಂದಿಗೆ 'ನಾರಿ ಶಕ್ತಿ ಗ್ರೀನ್ ವೇ' ಪ್ರಾಜೆಕ್ಟ್ ಅಡಿಯಲ್ಲಿ ಶಿರಸಿಯ ರಂಗಧಾಮದಲ್ಲಿ ದಿನಾಂಕ 27-06-2026, ಶನಿವಾರದಂದು ಮಹಿಳಾ ಸಮಾವೇಶವನ್ನು ಆಯೋಜಿಸಿತ್ತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, "2003 ರಲ್ಲಿ ಬಡತನ ಹಾಗೂ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ನನ್ನ ಸ್ನೇಹಿತರೊಂದಿಗೆ ಮನುವಿಕಾಸ ಸಂಸ್ಥೆಯನ್ನು ಸ್ಥಾಪಿಸಿದೆವು. ಇಂದು ಮನುವಿಕಾಸ ಸಂಸ್ಥೆಯು 6 ಜಿಲ್ಲೆಗಳ 25 ತಾಲೂಕುಗಳಲ್ಲಿ ರೈತರ ಸಹಭಾಗಿತ್ವದೊಂದಿಗೆ 354 ಕೆರೆಗಳನ್ನು ಅಭಿವೃದ್ಧಿಪಡಿಸಿದ್ದು, 4,500 ಕೃಷಿಹೊಂಡಗಳನ್ನು ನಿರ್ಮಿಸಿದೆ. ಸಂಸ್ಥೆಯು 4,000 ಕ್ಕೂ ಅಧಿಕ ಸ್ವಸಹಾಯ ಸಂಘಗಳನ್ನು ರಚಿಸಿದ್ದು, ಹೊಲಿಗೆ, ಜೇನು ಸಾಕಾಣಿಕೆ, ಅಡುಗೆ, ಕೋಳಿ ಸಾಕಾಣಿಕೆ ಸೇರಿದಂತೆ ವಿವಿಧ ತರಬೇತಿಗಳನ್ನು ನೀಡುತ್ತಿದೆ. ಸಾವಿರಾರು ಮಹಿಳೆಯರನ್ನು ಒಗ್ಗೂಡಿಸಿ ರೈತ ಉತ್ಪಾದಕ ಕಂಪನಿಯನ್ನು ಆರಂಭಿಸಿದ್ದೇವೆ. ನಮ್ಮ ಕಲ್ಪನೆಗೂ ಮೀರಿ ಸಂಸ್ಥೆಯು ಬೆಳೆದು ನಿಂತಿದೆ" ಎಂದು ಹೇಳಿದರು.

ಅವರು ಮುಂದುವರಿದು, "ಮಹಿಳೆಯರಿಗೆ ಸಮಗ್ರ ಕೃಷಿ ಪದ್ಧತಿ ನಿರ್ವಹಣೆ ಕುರಿತು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದೇವೆ. ಜನರ ಅವಶ್ಯಕತೆಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದ್ದೇವೆ. ಮಹಿಳೆಯರ ಸ್ವಯಂ ಉದ್ಯೋಗಕ್ಕೆ ಮನುವಿಕಾಸ ಸಂಸ್ಥೆಯು ಸದಾಬೆನ್ನೆಲುಬಾಗಿ ನಿಂತಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಬಡತನದಿಂದ ಮೇಲಕ್ಕೆತ್ತುವುದೇ ನಮ್ಮ ಪರಮೋಚ್ಚ ಗುರಿಯಾಗಿದೆ. ನಮ್ಮ ಎಲ್ಲಾ ಚಟುವಟಿಕೆಗಳಿಗೆ ಸಹಕಾರವನ್ನು ನೀಡುತ್ತಿರುವ ಈಡಲ್ ಗಿವ್ ಫೌಂಡೇಶನ್ ಗೆ ಧನ್ಯವಾದವನ್ನು ಹೇಳುತ್ತೇನೆ." ಎಂದು ತಿಳಿಸಿದರು.

ಮೂರನೇ ಪುಟದಿಂದ ಮುಂದುವರೆದಿದೆ

# ಸಂಪಾದಕೀಯ



ಆತ್ಮೀಯ ಓದುಗರೇ...

ಮನುವಿಕಾಸ ಸಂಸ್ಥೆಯ ಈ ಬಾರಿಯ ತ್ರೈಮಾಸಿಕ ವಾರ್ತಾಪತ್ರವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ನನಗೆ ಅತೀವ ಸಂತಸವೆನಿಸುತ್ತಿದೆ. ಈ ಮೂಲಕ ನಮ್ಮ ಸಂಸ್ಥೆಯ ವಿವಿಧ ಸಾಮಾಜಿಕ ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇವೆ. ಮಹಿಳಾ ಸಬಲೀಕರಣ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಸಮುದಾಯ ಆಧಾರಿತ ಅಭಿವೃದ್ಧಿ ಕ್ರಮಗಳು ಮೊದಲಾದ ಕಾರ್ಯಚಟುವಟಿಕೆಗಳ ಮೂಲಕ ಸಂಸ್ಥೆಯು ಗ್ರಾಮೀಣ ಸಮುದಾಯದ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಕಳೆದ 23 ವರ್ಷಗಳಿಂದ ತರುತ್ತಿದೆ.

“ಸಮಾಜದ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಬೆಳವಣಿಗೆಯಲ್ಲ, ಪ್ರತಿಯೊಬ್ಬರ ಬದುಕಿನಲ್ಲಿ ಗೌರವ, ಸಮಾನತೆ ಮತ್ತು ಅವಕಾಶಗಳನ್ನು ನಿರ್ಮಿಸುವ ಪ್ರಕ್ರಿಯೆಯಾಗಿದೆ.” ಎನ್ನುವ ಮಾತಿನಂತೆ ಮಹಿಳೆಯರ ಆತ್ಮವಿಶ್ವಾಸ, ಆರ್ಥಿಕ ಸ್ವಾವಲಂಬನೆ ಮತ್ತು ನಾಯಕತ್ವವನ್ನು ಬೆಳೆಸುವ ದಿಕ್ಕಿನಲ್ಲಿ ಸಂಸ್ಥೆ ಕೈಗೊಂಡಿರುವ ಕಾರ್ಯಕ್ರಮಗಳು ಸಮುದಾಯದ ಶಕ್ತಿಯನ್ನು ಹೆಚ್ಚಿಸುತ್ತಿವೆ. ಈ ನಿಟ್ಟಿನಲ್ಲಿ ಕಳೆದ 9 ವರ್ಷಗಳಿಂದ ಮನುವಿಕಾಸವು ಈಡಲ್‌ಗೀವ್ ಫೌಂಡೇಶನ್ ಸಹಯೋಗದೊಂದಿಗೆ ಮಹಿಳಾ ಸಬಲೀಕರಣದ ಅಡಿಯಲ್ಲಿ ಹಲವಾರು ಕೌಶಲ್ಯಾಧಾರಿತ ಕಾರ್ಯಚಟುವಟಿಕೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ‘ನಾರಿ ಶಕ್ತಿ ಗ್ರೀನ್ ವೇ’ ಯೋಜನೆಯ ಅಡಿಯಲ್ಲಿ ಕೈಗೊಂಡ ಕೆಲವು ಕಾರ್ಯಕ್ರಮಗಳ ಸಾರಾಂಶವನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ. ಜೊತೆಗೆ ಶಿರಸಿಯ ರಂಗಧಾಮದಲ್ಲಿ ಜೂನ್ 27 ರಂದು ನಡೆದ ಮಹಿಳಾ ಸಮಾವೇಶದ ಚಿತ್ರಣವನ್ನು ಒದಗಿಸಲಾಗಿದೆ.

ಅದೇ ರೀತಿ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಮರ್ಪಕ ನಿರ್ವಹಣೆಯ ಮೂಲಕ ಪರಿಸರ ಸಮತೋಲನದ ಜೊತೆಗೆ ಗ್ರಾಮೀಣ ಜೀವನೋಪಾಯವನ್ನು ಬಲಪಡಿಸುವ ಪ್ರಯತ್ನಗಳು ಸಂಸ್ಥೆಯಿಂದ ಯಶಸ್ವಿಯಾಗಿ ಮುಂದುವರಿಯುತ್ತಿವೆ. ಸಂಸ್ಥೆಯು ವಿವಿಧ ದಾನಿ ಸಂಸ್ಥೆಗಳ ಸಹಯೋಗದೊಂದಿಗೆ ಹಲವಾರು ವಿನೂತನ ಯೋಜನೆಗಳನ್ನು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕು ಮತ್ತು ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕುಗಳಲ್ಲಿ ಅನುಷ್ಠಾನಗೊಳಿಸುತ್ತಿದೆ. ಆ ಯೋಜನೆಗಳ ಸಮಗ್ರ ಮಾಹಿತಿಯನ್ನು ಈ ಸಂಚಿಕೆ ಒಳಗೊಂಡಿದೆ.

ಲಭ್ಯವಿರುವ ಸ್ಥಳೀಯ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸುಸ್ಥಿರ ಬದುಕನ್ನು ಕಟ್ಟಿಕೊಂಡ ಅನೇಕ ಸಮುದಾಯಗಳ ಯಶೋಗಾಥೆಗಳನ್ನು ನಾವು ನೀವೆಲ್ಲ ಕೇಳಿದ್ದೇವೆ. ಅಂತಹ ಯಶಸ್ಸಿನ ಕಥೆಗಳ ಪಟ್ಟಿಗೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಹಾಸಣಗಿ ಪಂಚಾಯತ್ ವ್ಯಾಪ್ತಿಯ ಬೈಚಗೋಡ ಗ್ರಾಮ ಸೇರಿದೆ. ಬೈಚಗೋಡು ಶಾಲೆಯ ಅಭಿವೃದ್ಧಿ ಯೋಜನೆಯ ಉದ್ದೇಶ ಮತ್ತು ಬೈಚಗೋಡಿನ ಸರಕಾರಿ ಕೆರೆಯ ಪುನರುಜ್ಜೀವನ ಕೆಲಸದ ಸವಾಲುಗಳ ಚಿತ್ರಣದ ಜೊತೆಗೆ ಕೆರೆಯ ಹಸ್ತಾಂತರ ಕಾರ್ಯಕ್ರಮದ ವಿವರಗಳನ್ನು ಈ ಸಂಚಿಕೆಯಲ್ಲಿ ಒದಗಿಸಲಾಗಿದೆ.

ಈ ವಾರ್ತಾಪತ್ರ ಕೇವಲ ನಮ್ಮ ಕಾರ್ಯಯೋಜನೆಗಳ ಮಾಹಿತಿಯನ್ನು ನಿಮ್ಮ ಬಳಿಗೆ ತಲುಪಿಸುವ ಸಾಧನವಾಗಿರದೇ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಲು ನಮ್ಮ ನಿಮ್ಮೆಲ್ಲರ ಸಾಮೂಹಿಕ ಪ್ರಯತ್ನಗಳ ಪ್ರತಿಬಿಂಬವಾಗಿದೆ. ಮುಂದಿನ ದಿನಗಳಲ್ಲಿಯೂ ಸಮುದಾಯದೊಂದಿಗೆ ಕೈಜೋಡಿಸಿ ಸದೃಢ, ಸಮಾನ ಮತ್ತು ಸುಸ್ಥಿರ ಸಮಾಜ ನಿರ್ಮಾಣದತ್ತ ನಮ್ಮ ಪ್ರಯತ್ನಗಳು ನಿರಂತರವಾಗಿರಲಿವೆ. ಇದಕ್ಕೆ ನಿಮ್ಮ ಸಹಕಾರ ಸದಾ ಇರಲಿ ಎಂಬುದು ನಮ್ಮಯ ಅರಿಕೆ.

ಭಾರತ ದೇಶದ ಮಾಜಿ ರಾಷ್ಟ್ರಪತಿಗಳಾದ ದಿವಂಗತ ಡಾ. ಎ.ಪಿ.ಜೆ ಅಬ್ದುಲ್ ಕಲಾಂರವರ ಮಾತಿನಂತೆ ಪ್ರಗತಿಯೆಂದರೆ “ಒಬ್ಬ ವ್ಯಕ್ತಿಯ ಅಭಿವೃದ್ಧಿಯಲ್ಲ, ಸಂಪೂರ್ಣ ಸಮಾಜದ ಅಭಿವೃದ್ಧಿಯೇ ನಿಜವಾದ ಪ್ರಗತಿ.” ಈ ನಿಟ್ಟಿನಲ್ಲಿ ನೀವೆಲ್ಲ ನಮ್ಮೊಂದಿಗೆ ಕೈ ಜೋಡಿಸುತ್ತೀರಿ ಎನ್ನುವ ವಿಶ್ವಾಸದೊಂದಿಗೆ...

ಗಣಪತಿ ಭಟ್ಟ
ನಿರ್ದೇಶಕರು
ಮನುವಿಕಾಸ

ಮೊದಲನೇ ಪುಟದಿಂದ

ಶಿರಸಿ–ಸಿದ್ದಾಪುರ ಕ್ಷೇತ್ರದ ಶಾಸಕರಾದ ಭೀಮಣ್ಣ ನಾಯ್ಕ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, "ಮನುವಿಕಾಸ ಸಂಸ್ಥೆಯು ಕಳೆದ 23 ವರ್ಷಗಳಿಂದ ಕೃಷಿ ಹಾಗೂ ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ನಿರಂತರವಾಗಿ ಶ್ರಮಿಸುತ್ತಿದೆ. ನಮ್ಮ ಶಿರಸಿ ತಾಲೂಕಿನ ಬನವಾಸಿ ಭಾಗದಲ್ಲಿ ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿರುವುದರಿಂದ ಸಾವಿರಾರು ರೈತರಿಗೆ ಅನುಕೂಲವಾಗಿದೆ. ಮನುವಿಕಾಸ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಗಣನೀಯವಾಗಿದೆ. ತಾಯಂದಿರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ, ನಾಳಿನ ಉತ್ತಮ ನಾಗರಿಕರನ್ನು ರೂಪಿಸಬೇಕು" ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಪ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಗೀತಾ ಪಾಟೀಲ್ ಅವರು ಮಾತನಾಡಿ, "ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆದಾಗ ಸಮಾಜ ಹಾಗೂ ದೇಶದ ಏಳಿಗೆ ಸಾಧ್ಯವಾಗುತ್ತದೆ. ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳಷ್ಟೇ ಶಿಕ್ಷಣ ನೀಡಬೇಕು. ಒಂದು ಕುಟುಂಬವನ್ನು ಮುನ್ನಡೆಸುವಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಇತ್ತೀಚಿನ ದಿನಗಳಲ್ಲಿ ಪೋಕ್ಸೋ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪೋಷಕರು ತಮ್ಮ ಮಕ್ಕಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಮಕ್ಕಳು ತಪ್ಪು ದಾರಿಯಲ್ಲಿ ಸಾಗುತ್ತಿದ್ದರೆ ಅವರನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಬೇಕು. ನಿಮ್ಮ ಸಹಾಯಕ್ಕೆ ಪೊಲೀಸ್ ಇಲಾಖೆಯಿದ್ದು, ಯಾವುದೇ ಸಮಸ್ಯೆಯಿದ್ದರೆ 112ಕ್ಕೆ ಕರೆ ಮಾಡಿದರೆ ನಮ್ಮ ಇಲಾಖೆ ಕೂಡಲೇ ಸ್ಪಂದಿಸುತ್ತದೆ. ಉತ್ತಮ ಕುಟುಂಬ ವ್ಯವಸ್ಥೆ ಬೆಳೆಯಲಿ" ಎಂದು ಹೇಳಿದರು.






ಉತ್ತಮ ಸಂಪನ್ಮೂಲ ವ್ಯಕ್ತಿಯ ಸನ್ಮಾನ ಸ್ವೀಕರಿಸಿದ ಸುಜಾತ ಸಿದ್ದಿ ಅವರು ಮಾತನಾಡಿ, "ಮನುವಿಕಾಸ ಸಂಸ್ಥೆಯು ನಮ್ಮ ಭಾಗದ ಸಿದ್ದಿ ಬುಡಕಟ್ಟು ಜನಾಂಗಕ್ಕೆ ಜೇನು ಪೆಟ್ಟಿಗೆಗಳು ಹಾಗೂ ಅಡಿಕೆ ಸಸಿಗಳನ್ನು ನೀಡಿ ಆದಾಯ ಗಳಿಸುವ ಅವಕಾಶ ಕಲ್ಪಿಸಿದೆ. ಇದರಿಂದ ನಮ್ಮ ಆರ್ಥಿಕ ಅಭಿವೃದ್ಧಿಗೆ ನೆರವಾಗಿದೆ. ಸಂಸ್ಥೆಯ ಸಹಕಾರದಿಂದ 'ಸಿದ್ದಿ ಸಿರಿ' ರೈತ ಉತ್ಪಾದಕರ ಸಂಘವನ್ನು ಸ್ಥಾಪಿಸಿದ್ದು, ಅದುನಮ್ಮ ಸ್ವಾವಲಂಬಿ ಬದುಕಿಗೆ ಬಲವಾಗಿದೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಂಸ್ಥಾಪಕರಾದ ಹರಿಶ್ಚಂದ್ರ ಭಟ್ಟ, ಅಸ್ಮಿತೆ ಫೌಂಡೇಶನ್‌ನ ರಿಯಾಜ್ ಸಾಗರ್, ಸಂಕಲ್ಪ ಟ್ರಸ್ಟ್‌ನ ಕುಮಾರ ಪಟಗಾರ, ಹಾವೇರಿ ಚೈತನ್ಯ ರೂರಲ್ ಡೆವೆಲಪಮೆಂಟ್ ಸೊಸೈಟಿಯ ಮಜೀದ್, ಪ್ರಗತಿಮಿತ್ರ ಸೌಹಾರ್ದದ ವ್ಯವಸ್ಥಾಪಕ ನಿರ್ದೇಶಕರಾದ ವಿವೇಕ ಹೆಗಡೆ, ನಿವೃತ್ತ ಉಪನ್ಯಾಸಕರಾದ ಎಸ್. ಎಂ. ಕಮನಳ್ಳಿ, ಕೆನರಾ ಬ್ಯಾಂಕ್ ನ ಎಫ್. ಎಲ್ ಸಿ ಮಾಬ್ಲೇಶ್ವರ ನಾಯ್ಕ ಸೇರಿದಂತೆ ಹಲವಾರು ಗಣ್ಯರು, ಸಾಮಾಜಿಕ ಕಾರ್ಯಕರ್ತರು, 1,000ಕ್ಕೂ ಅಧಿಕ ಸ್ವಸಹಾಯ ಸಂಘಗಳ ಮಹಿಳೆಯರು ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಸನ್ಮಾನಿಸಲ್ಪಟ್ಟ ಸ್ವ - ಉದ್ಯಮಶೀಲರು

| ಸನ್ಮಾನಿತರ ಹೆಸರು | ಉದ್ಯಮ |
|---|---|
| ಕುಮಾರಿ ವಿನುತಾ ನಾಗೇಶ ನಾಯ್ಕ, ಬ್ಯಾಗದ್ದೆ | ವಸ್ತ್ರ ವಿನ್ಯಾಸ |
| ಕುಮಾರಿ. ರಬೇಕಾ ಸಾವೇರ ಡಯಾಸ ಹುತ್ತಗಾರ್ | ಹೊಲಿಗೆ |
| ಶ್ರೀಮತಿ ಸವಿತಾ ಯಲ್ಲ ಸಿದ್ದಿ. ಉಚಗೇರಿ | ಜೇನು ಸಾಕಣೆ |
| ಶ್ರೀಮತಿ ನೇತ್ರಾವತಿ ಮಹೇಶ ಹೆಗಡೆ, ಬಾಳೇಸರ | ಗೃಹ ಉದ್ಯಮ |
| ಶ್ರೀಮತಿ, ಚೇತನಾ ಮಂಜುನಾಥ್ ನಾಯ್ಕ, ಕಾನಸೂರು | ಹೊಲಿಗೆ ಮತ್ತು ಬ್ಯೂಟಿಷಿಯನ್ |



# ಉತ್ತಮ ಸಮುದಾಯ ಸಂಪನ್ಮೂಲ ವ್ಯಕ್ತಿಗಳು




| |
|---|
| ಶ್ರೀಮತಿ ಸುಜಾತಾ ಸುರೇಶ ಸಿದ್ದಿ |
| ಶ್ರೀಮತಿ ಸುರೇಖಾ ಶಂಕರಪ್ಪ ಹಾದಿಮನಿ |
| ಶ್ರೀಮತಿ ಗೌತಮಿ ಗೋಕುಲದಾಸ ಕೆರೆಮನೆ |
| ಶ್ರೀಮತಿ ಅನ್ನಪೂರ್ಣ ಸುರೇಶ ಕುರ್ಲಿ |
| ಶ್ರೀಮತಿ ಶಶಿಕಲಾ ವಿನಾಯಕ ಛಲವಾದಿ |

**ಮನುವಿಕಾಸ ಸಂಸ್ಥೆಯು ಸಮುದಾಯದ ಸಮಸ್ಯೆಗಳನ್ನು ಸ್ಥಳೀಯ ಮಟ್ಟದಲ್ಲಿ ಗುರುತಿಸಿ, ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ನೇಮಕ ಮಾಡಿದೆ. ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಪ್ರದೇಶಗಳಲ್ಲಿ ಸಕ್ರಿಯವಾಗಿ ಸಂಸ್ಥೆಯ ಯೋಜನೆಯನ್ನು ಜನಸಮುದಾಯಕ್ಕೆ ತಲುಪಿಸುವಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಗೌರವಿಸಲಾಗಿದೆ.**









2026
ಸ್ಥಳ : ರಂಗಧಾಮ, ಶಿರಸಿ (ಉ.ಕ.)






ಮಹಿಳಾ ಸಮಾವೇಶ
WOMEN CONVENTION

# ಕಾಡಿನ ಶಾಲೆ ಮತ್ತು ಜೀವ ತುಂಬಿದ ಕೆರೆ

ಅದೊಂದು ಮಳೆಗಾಲದ ದಿನ. ಚೌತಿಗೆ ಇನ್ನೇನು ನಾಲ್ಕಾರು ದಿನಗಳು ಬಾಕಿ ಇದ್ದಿರಬಹುದು. ಸಂಜೆಯ ಹೊತ್ತಿಗೆ ನಮ್ಮ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರು ಅವರ ಛೇಂಬರಿಗೆ ಕರೆದಿದ್ದರು. ಯಲ್ಲಾಪುರ ತಾಲೂಕಿನ ಶಾಲೆಯೊಂದನ್ನು ಅಭಿವೃದ್ಧಿಪಡಿಸುವ ಯೋಜನೆ ರೂಪಿಸಲಾಗಿದೆ, ನಾಳೆ ಒಮ್ಮೆ ಹೋಗಿ ಶಾಲೆಯನ್ನು ನೋಡಿ ಬಾ ಎಂದು ಹೇಳಿ ಕಳಿಸಿದ್ದರು.



ಮರುದಿನ ನನ್ನ ಸಹೋದ್ಯೋಗಿ ಮಿತ್ರ ನಾಗರಾಜ ಬಾಳೇಸರನ ಜೊತೆ ಬೈಕನ್ನೇರಿ ಮಂಚಿಕೇರಿ ಕಡೆಗೆ ನಮ್ಮ ಪ್ರಯಾಣ ಸಾಗಿತ್ತು. ಕಾಡಿನ ಮಧ್ಯೆ ಯಾವುದೇ ಗಲಾಟೆ, ಗೌಜಿಯಿಲ್ಲದೆ ಅತ್ಯಂತ ಪ್ರಶಾಂತವಾದ ಹಸಿರ ವಾತಾವರಣದ ನಡುವೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೈಚಗೋಡು ನಿಂತಿತ್ತು .

ಅಲ್ಲಿಯ ಮುಖ್ಯಾಧ್ಯಾಪಕಿ ಶಕುಂತಲಾ ನಾಯ್ಕ್ ಅವರ ಜೊತೆ ಮಾತಾಡಿದಾಗ "ಈ ಶಾಲೆ ಶುರು ಆಗಿದ್ದು ಬಹಳ ವರ್ಷಗಳ ಹಿಂದೆ, ಶಾಲೆ ಕಟ್ಟಬೇಕು ಎಂದು ಊರವರೆಲ್ಲ ನಿರ್ಧರಿಸಿ, ಮನೆ ಮನೆ ತಿರುಗಿ ದೇಣಿಗೆ ಸಂಗ್ರಹ ಮಾಡಿದ್ರು, ದೇಣಿಗೆ ರೂಪದಲ್ಲಿ ಕೆಲವರು ಭತ್ತ, ದವಸ ಧಾನ್ಯವನ್ನು ನೀಡಿದ್ದರಂತೆ" ಎಂದು ನೆನೆಸಿಕೊಂಡು ಶಾಲೆಯನ್ನು ಕಟ್ಟಿದ ಕಥೆ ಹೇಳುತ್ತಾ ಭಾವುಕರಾದರು.




ಒಂದೆಡೆ 75 ವರ್ಷಗಳ ವಸಂತಕ್ಕೆ ಕಾಲಿಟ್ಟು ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳಲು ಶಾಲೆ ಕಾಯುತ್ತಿತ್ತು. ಇನ್ನೊಂದೆಡೆ ಶಾಲೆಗೆ ಬರಲು ಹಾದಿ ಸುಲಭವಾಗಿಲ್ಲ; ಕೆಲ ಮಕ್ಕಳಿಗೆ ಮಳೆಗಾಲದಲ್ಲಿ ದೊಡ್ಡ ಹಳ್ಳವನ್ನು ದಾಟಿ ಬರಬೇಕು. ಹಳ್ಳವನ್ನು ದಾಟಿಸಲು ಸಹಾಯಕ್ಕೆ ಯಾರಾದರೂ ಬೇಕು. ಕೆಲ ಸಮಯದಲ್ಲಿ ಹುಲಿ ಕೂಗುವ ಶಬ್ದ ಕೇಳುತ್ತದೆ, ಅಂತಹ ಸಮಯದಲ್ಲಿ ಪಾಲಕರು ಮಕ್ಕಳನ್ನು ಶಾಲೆಗೆ ಬೆಳಿಗ್ಗೆ ಕರೆತಂದು ಸಂಜೆ ಮತ್ತೆ ಕರೆದೊಯ್ಯಲು ಬರುತ್ತಾರೆ ಎಂಬ ವಿಷಯ ನನಗೆ ಅರಿವಾಯಿತು. ಕೆಲವೊಮ್ಮೆ ಶಿಕ್ಷಕರೇ ಮಕ್ಕಳನ್ನು ಮನೆಗೆ ತಲುಪಿಸಿ ಬಂದ ಉದಾಹರಣೆಗಳೂ ಇದ್ದವು. ಮಕ್ಕಳ ಶಿಕ್ಷಣಕ್ಕಾಗಿ, ರಕ್ಷಣೆಗಾಗಿ, ಅವರ ಉಜ್ವಲ ಭವಿಷ್ಯದ ಆಶಾವಾದದಲ್ಲಿ ತಂದೆ ತಾಯಂದಿರು, ಶಿಕ್ಷಕರು ಏನೆಲ್ಲಾ ಮಾಡುತ್ತಾರೆ ಎಂಬುದಕ್ಕೆ ಇದು ಸಣ್ಣ ನಿದರ್ಶನ ಎಂದು ನನಗೆ ಅನಿಸಿತು.

ಇಂತಹ ಕಾಡ ನಡುವಿನ ಶಾಲೆಯಲ್ಲಿ ಓದುತ್ತಿರುವ, ಕಂಗಳಲ್ಲಿ ಕಲಿಯುವ ವಿಚಾರಗಳ ಬಗ್ಗೆ ಕುತೂಹಲವನ್ನೇ ತುಂಬಿಕೊಂಡಿರುವ ಈ ಮಕ್ಕಳಲ್ಲಿ ಹುಟ್ಟುವ ಪ್ರಶ್ನೆಗಳಿಗೆ ಉತ್ತರವನ್ನು ದೊರಕಿಸುವ ಜವಾಬ್ದಾರಿ ನಮ್ಮದು ಎಂಬ ವಿಷಯ ಅರ್ಥವಾಯಿತು.




ಶಾಲೆಯನ್ನೊಮ್ಮೆ ನೋಡಿ ಅಲ್ಲಿನ ಮಕ್ಕಳೊಟ್ಟಿಗೆ ಮಾತನಾಡಿ ಶಾಲೆಗೆ ಬೇಕಾಗಿರುವ ಅಗತ್ಯತೆಗಳೇನು ಎಂಬುದರ ಕುರಿತಾಗಿ ಶಿಕ್ಷಕರು ಹಾಗೂ ಪಾಲಕರಿಂದ ತಿಳಿದುಕೊಂಡ ಮೇಲೆ ಈ ಕಾಡಿನ ನಡುವಿನ ಶಾಲೆಯ ಮಕ್ಕಳನ್ನು ಹೊರಗಿನ ಜಗತ್ತಿನ ಇಂಟರ್ನೆಟ್ ಯುಗದಲ್ಲಿ ಪಳಗುತ್ತಿರುವ ಮಕ್ಕಳ ಜೊತೆ ಶೈಕ್ಷಣಿಕವಾಗಿ ಸ್ಪರ್ಧಿಸಲು ಅಣಿಯಾಗಿಸಿ, ಅವರ ಕನಸುಗಳಿಗೆ ಏಣಿ ಹಾಕಲು ಇದಕ್ಕಿಂತ ಒಳ್ಳೆಯ ಸಮಯ ಇಲ್ಲ ಎಂದೆನಿಸಿ ಶಾಲೆಗೆ ಬೇಕಾದ ಅಗತ್ಯತೆಗಳ ಕುರಿತಾಗಿ ನಿರ್ದೇಶಕರ ಬಳಿ ತಿಳಿಸಿ ಯೋಜನೆಯನ್ನು ಆರಂಭಿಸಲಾಯಿತು.




ಇಷ್ಟೆಲ್ಲಾ ಹೇಳಿದ ಮೇಲೆ ಹೇಳದೆ ಉಳಿದಿರುವ ಒಂದು ವಿಷಯವಿದೆ. ಈ ಶಾಲೆಯ ಅಭಿವೃದ್ಧಿ ಯೋಜನೆಯ ರೂವಾರಿಯ ಮತ್ತು ಅವರ ಊರಿನ ಬಗ್ಗೆ. ಕಾಡ ನಡುವಿನ ಮಕ್ಕಳ ಅಗತ್ಯತೆಗಳನ್ನು, ಈ ಯೋಜನೆಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳಲು ಬೇಕಾದ ಸಹೃದಯ, ಸಹಾನುಭೂತಿ ಇವೆರಡೂ ಒಂದು ವ್ಯಕ್ತಿಯಲ್ಲಿ ಕಾಣಲು ಸಿಗಬೇಕೆಂದರೆ ಹೇಗೆ ಸಾಧ್ಯ ಹೇಳಿ. ಅವರೂ ಇಂತಹ ಕಾಡ ನಡುವಿನ ಶಾಲೆಯಲ್ಲೇ ಓದಿದ್ದರೆ ಅಲ್ಲವೇ?.

ಹೆಸರು ಶ್ರೀಮತಿ ವಿಜಯಾ ಹೆಗಡೆ. ಊರು ಇದೇ ಬೈಚಗೋಡು. ಇದೇ ಕಾಡ ನಡುವಿನ ಶಾಲೆಯಲ್ಲಿ ಶ್ರದ್ಧೆಯಿಂದ ಕಲಿತು, ಹೊರಗಿನ ಜಗತ್ತಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ, ಬೆಂಗಳೂರಿನಲ್ಲಿ ಸುಂದರ ಬದುಕನ್ನು ಕಟ್ಟಿಕೊಂಡಿರುವ ಒಬ್ಬ ಛಲಗಾರ್ತಿ ಮಹಿಳೆ.




ಇವರು ಪ್ರಸ್ತುತ ಬೆಂಗಳೂರಿನ ಪ್ರತಿಷ್ಠಿತ ಕ್ಲೂಬರ್ ಲುಬ್ರೀಕೇಶನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತಿದ್ದಾರೆ. ಅವರಿಗೆ ತಾನು ಕಲಿತ ಶಾಲೆ ಮತ್ತು ತನ್ನೂರನ್ನು ಅಭಿವೃದ್ಧಿಪಡಿಸುವ ಕನಸಿತ್ತು, ಅವರ ಕನಸನ್ನು ನೆರವೇರಿಸುವಲ್ಲಿ ಜೊತೆಯಾಗಿದ್ದು ಮನುವಿಕಾಸ ಸಂಸ್ಥೆ; ಆರ್ಥಿಕ ಸಹಕಾರ ದೊರಕಿದ್ದು ಅವರು ಕೆಲಸ ಮಾಡುತ್ತಿರುವ ಕಂಪನಿಯಿಂದ.

ಈ ಯೋಜನೆಯಡಿ ಬೈಚಗೋಡು ಶಾಲೆಗೆ ಅಗತ್ಯವಾಗಿ ಬೇಕಾದಂತಹ ಸ್ಮಾರ್ಟ್ ಬೋರ್ಡ್, ಕಂಪ್ಯೂಟರ್, ಯುಪಿಎಸ್, ಗ್ರಂಥಾಲಯದ ಕಪಾಟು, ಶಾಲೆಗೆ ಸುಣ್ಣ-ಬಣ್ಣ, ಸಣ್ಣಪುಟ್ಟ ರಿಪೇರಿಗಳನ್ನು ಮಾಡಲಾಯಿತು. 2025ರ ಡಿಸೆಂಬರ್ 27ರಂದು ಶಾಲಾ ನವೀಕರಣ ಮತ್ತು ಕಲಿಕೋಪಕರಣಗಳ ಹಸ್ತಾಂತರ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈಗ ಗಣಿತ, ವಿಜ್ಞಾನ, ಇತಿಹಾಸದ ಕುರಿತಾದ ಮಾಹಿತಿಯನ್ನ ಸ್ಮಾರ್ಟ್ ಬೋರ್ಡ್ ಮೂಲಕವೇ ಮಕ್ಕಳು ಕಲಿಯುತ್ತಿದ್ದಾರೆ.

ಕೆಲವು ಸಾಮಾಜಿಕ ಕೆಲಸಗಳು ಬೇಗನೇ ಮುಗಿದು ಹೋದರೂ ಅದರಿಂದ ಬೊಗಸೆ ತುಂಬಾ ನೆನಪುಗಳು ದೊರೆಯುತ್ತವೆ. ಮನುವಿಕಾಸ ಸಂಸ್ಥೆಯಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಹೀಗೆ ಒಂದೊಂದು ಯೋಜನೆಯಲ್ಲಿ ಅವರ ಜೀವನದ ಸಾರ್ಥಕ್ಯ ಭಾವಗಳು ದೊರೆತಿರಬಹುದು.



ನಾನು ಕಳೆದ ಐದುವರೆ ವರ್ಷಗಳಿಂದ ಮನುವಿಕಾಸ ಸಂಸ್ಥೆಯೊಟ್ಟಿಗೆ ಕೆರೆಗಳ ಪುನರುಜ್ಜೀವನ, ಕೃಷಿಹೊಂಡಗಳ ನಿರ್ಮಾಣದ ಜಲ ಸಂರಕ್ಷಣೆ ಕಾಯಕದಲ್ಲಿ ತೊಡಗಿಕೊಂಡಿದ್ದೇನೆ. ಕೆಲವೊಮ್ಮೆ ಅತಿ ಕಷ್ಟದ ಪರಿಸ್ಥಿತಿಯಲ್ಲಿ ನಿಭಾಯಿಸಿದ ಕೆಲಸಗಳು ನಮ್ಮೊಟ್ಟಿಗೆ ಶಾಶ್ವತವಾಗಿ ನೆನಪಿನಲ್ಲಿ ಇದ್ದು ಬಿಡುತ್ತದೆ. ಅಂತಹ ಸಾಲಿನಲ್ಲಿ ನಮ್ಮ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಬೈಚಗೋಡು ಗ್ರಾಮದಲ್ಲಿ ಪುನಶ್ಚೇತನಗೊಳಿಸಿದ ಬೈಚಗೋಡ ಸರಕಾರಿ ಕೆರೆಯ ಉದಾಹರಣೆ ವಿಶೇಷವಾಗಿದೆ.

ಶ್ರೀಮತಿ ವಿಜಯಾ ಹೆಗಡೆಯವರು ತಮ್ಮೂರ ಕೆರೆಯನ್ನು ಮನುವಿಕಾಸ ಸಂಸ್ಥೆಯ ಸಹಕಾರದೊಂದಿಗೆ ಅಭಿವೃದ್ಧಿಪಡಿಸುವ ಕುರಿತಾಗಿ ಹೇಳಿದ್ದರು. ಮಳೆಗಾಲದಲ್ಲಿಯೇ ಬೈಚಗೊಡಿಗೆ ಹೋಗಿ ಕೆರೆ ನೋಡಿದ್ದೆ. ಹಿರಿಯರಾದ ಸತ್ಯನಾರಾಯಣ ಹೆಗಡೆ ಹಾಗೂ ಸ್ಥಳೀಯರಾದ ಮಂಜು ಮರಾಠಿಯೊಂದಿಗೆ ಕೆರೆಯ ಬಗ್ಗೆ ತಿಳಿದುಕೊಂಡಿದ್ದೆ. ಈ ಕೆರೆ ನಾವು ಕಂಡಂಗೆ ಯಾವತ್ತೂ ಬತ್ತಿದ್ದಿಲ್ಲ ಹೂಳೆತ್ತುದು ಕೂಡ ಸುಲಭಿಲ್ಲಾ ಎಂದು ಹೇಳಿದ್ದರು.

ಬೇಸಿಗೆ ಬರಲಿ ಆಮೇಲೆ ನೋಡೋಣ ಕೆರೆಯಲ್ಲಿ ನೀರಿನ ಹರಿವಿನ ಪ್ರಮಾಣವು ಕಡಿಮೆಯಾಗಿ ಕೆಲಸಕ್ಕೆ ಅನುಕೂಲವಾಗಬಹುದು ಎಂದು ಲೆಕ್ಕಾಚಾರ ಹಾಕಿದ್ದೆ. ಸಂಕ್ರಾಂತಿ ಕಳೆದ ನಂತರ ಕೆರೆ ಹೂಳೆತ್ತುವ ಕಾರ್ಯ ಶುರು ಮಾಡಿ ಎಂದು ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರು ಹಸಿರು ನಿಶಾನೆ ತೋರಿದರು. ಕೆರೆಗೆ ಹಿಟಾಚಿ ಬಂದು ನಿಂತಿತ್ತು ಸಂಸ್ಥೆಯ ಹಿರಿಕರಾದ ಕೊಪ್ಪಲತೋಟದ ಮಂಜುನಾಥ ಹೆಗಡೆಯವರನ್ನು ಕರೆದುಕೊಂಡು ಕೆರೆಯ ಅಂಗಳಕ್ಕೆ ಹೋಗಿದ್ದೆ. ಮಾರಾಯ ಈಗ ಈ ಕೆರೆ ಮಾಡಲೇ ಆಗೋದೇನಾ ಎಂಬ ಮಾತನ್ನು ಹೇಳಿದ್ದರು. ಹಿಟಾಚಿಯಾ ಬಕೇಟಿನಿಂದ ಹೂಳನ್ನು ತೆಗೆದರೆ ಅದು ಸಂಪೂರ್ಣ ಕೆಸರಾಗಿತ್ತು, ಕೆರೆಯ ಅಂಗಳಕ್ಕೆ ಇಳಿದು ಹಿಟಾಚಿ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ನಿರ್ದೇಶಕರಾದ ಗಣಪತಿ ಭಟ್ಟರಿಗೆ ಫೋನಾಯಿಸಿ ಸಾರ್ ನೀವೇ ಬಂದು ಒಮ್ಮೆ ಪರಿಸ್ಥಿತಿಯನ್ನು ಅವಲೋಕಿಸಿ ಹೇಗೆ ಮುಂದುವರೆಯಬೇಕೆಂದು ತಿಳಿಸಿ ಎಂದೆ.

ಬಿಡುವಿಲ್ಲದ ಸಮಯದಲ್ಲೂ ಬೈಚಗೋಡಿನ ಕೆರೆಗೆ ಬಂದು ಒಂದಷ್ಟು ಐಡಿಯಾಗಳನ್ನು ಕೊಟ್ಟು ಕೆಲಸ ಆರಂಭಿಸುವಂತೆ ಹೇಳಿ ಹೋದರು. ಏತನ್ಮಧ್ಯೆ ಅದೇನೋ ಗೊತ್ತಿಲ್ಲ, ಪದೇ ಪದೇ ಹಿಟಾಚಿಯು ದುರಸ್ತಿಗೆ ಬರುತ್ತಿತ್ತು. ಇದೊಳ್ಳೆ ಹೊಸ ತಲೆನೋವು ಬಂತಲ್ಲ ಎಂದು ಅಂದುಕೊಳ್ಳುವಾಗ ಸ್ಥಳೀಯರಾದ ಮಂಜು ಮರಾಠಿಯವರು ಒಂದು ಸಲಹೆ ನೀಡಿದರು ಕೆರೆ ಹತ್ತಿರವೇ ಒಂದು ದೇವರಿದೆ ಅದರಲ್ಲಿ ಮನಸಾರೆ ಪ್ರಾರ್ಥನೆ ಮಾಡಿಕೊಳ್ಳಿ ಕೆಲಸ ಸುರಳಿತವಾಗಿ ಸಾಗುತ್ತದೆ ಎಂದರು. ಅದರಂತೆ ನಮ್ಮ ಸಂಸ್ಥೆಯ ಮಂಜುನಾಥ ಹೆಗಡೆಯವರು ದೇವರಲ್ಲಿ ಪ್ರಾರ್ಥನೆ ಮಾಡಿದ್ದಾಯ್ತು, ಅದೇನೋ ಪವಾಡವೋ ಗೊತ್ತಿಲ್ಲ ಕೆಲಸ ಸುಸೂತ್ರವಾಗಿ ಸಾಗಿತು. ಮತ್ತೆ ಹಿಟಾಚಿ ಅಥವಾ ಟ್ರ್ಯಾಕ್ಟರ್ ಗಳು ದುರಸ್ತಿಗೆ ಬರಲಿಲ್ಲ.

ಒಟ್ಟಿನಲ್ಲಿ ಸುಸೂತ್ರವಾಗಿ 15 ದಿನಗಳ ನಂತರ ಕೆರೆಯ ಪುನರುಜ್ಜೀವನ ಕಾರ್ಯ ಪೂರ್ಣಗೊಂಡಿತು. ಈಗ ಕೆರೆಯು ತನ್ನ ಒಡಲಲ್ಲಿ ಸಮೃದ್ಧವಾಗಿ ನೀರನ್ನು ತುಂಬಿಕೊಂಡಿದೆ. ದನ ಕರುಗಳಿಗೆ, ಕಾಡು ಪ್ರಾಣಿಗಳಿಗೆ, ಪಕ್ಷಿಗಳಿಗೆ ಈ ಬಿರು ಬೇಸಿಗೆಯಲ್ಲೂ ಬಾಯಾರಿಕೆ ತಣಿಸಲು ಕೆರೆಯು ನೆರವಾಗಿದೆ. ಕೆರೆಯ ಅಚ್ಚುಕಟ್ಟಿನ ಪ್ರದೇಶಗಳಲ್ಲಿ ಬೇಸಿಗೆಯಲ್ಲೂ ಸಹ ಕೃಷಿ ಮಾಡಲು ಒಳ್ಳೆಯ ನೀರಾವರಿ ವ್ಯವಸ್ಥೆ ಕೂಡ ಆದಂತಾಗಿದೆ.

ತಾನು ಕಲಿತ ಶಾಲೆ, ತನ್ನೂರ ಕೆರೆ ಮತ್ತು ತನ್ನ ಊರು ಅಭಿವೃದ್ಧಿಗೊಳ್ಳಬೇಕು, ಹಳ್ಳಿಗಳಿಗೆ ಹೊಸ ಚೈತನ್ಯ ತುಂಬಬೇಕು ಎಂಬ ವಿಜಯಾ ಹೆಗಡೆಯವರ ಮನೋಭಾವನೆ ನಮ್ಮೆಲ್ಲರಿಗೂ ಆದರ್ಶಪ್ರಾಯವಾದದ್ದು. ಕಳೆದ ಐದಾರು ತಿಂಗಳುಗಳ ನನ್ನ ಮತ್ತು ಬೈಚಗೋಡ ಶಾಲೆ ಮತ್ತು ಕೆರೆ ಅಭಿವೃದ್ಧಿಯ ಒಡನಾಟ ಅವಿಸ್ಮರಣೀಯ.

**ಶ್ರೀಕಾಂತ ಹೆಗಡೆ, ದಂಟಕಲ್**





# ಪುನರುಜ್ಜೀವನದ ಮೊದಲು ಇದ್ದ ಕೆರೆಯ ಸ್ಥಿತಿ







# ಪುನರುಜ್ಜೀವನದ ನಂತರ







# ಬೈಚಗೋಡಿನ ಸರಕಾರಿ ಕೆರೆ ಹಸ್ತಾಂತರ ಕಾರ್ಯಕ್ರಮ




ಮನುವಿಕಾಸ ಸಂಸ್ಥೆಯು ಕ್ಲೂಬರ್ ಲುಬ್ರಿಕೇಶನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಹಾಗೂ ಸರ್ಟೆಕ್ ಕೆಮಿಕಲ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಇವರ ಆರ್ಥಿಕ ಸಹಕಾರದೊಂದಿಗೆ ಯಲ್ಲಾಪುರ ತಾಲೂಕಿನ ಹಾಸಣಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬೈಚಗೋಡ ಗ್ರಾಮದ ಸರಕಾರಿ ಕೆರೆಯನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದೆ. ಈ ಯೋಜನೆಯ ಭಾಗವಾಗಿ ದಿನಾಂಕ 24/4/2026 ಶುಕ್ರವಾರದಂದು ಬೈಚಗೋಡ ಕೆರೆಯ ಆವರಣದ ಮೇಲೆ ಮನುವಿಕಾಸ ಸಂಸ್ಥೆಯು ಕೆರೆ ಸಮರ್ಪಣಾ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಯಲ್ಲಾಪುರ ಹಾಗೂ ಮುಂಡಗೋಡ ವಿಧಾನಸಭಾ ಕ್ಷೇತ್ರದ ಶಾಸಕರಾದ ಶಿವರಾಮ ಹೆಬ್ಬಾರ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಮನುವಿಕಾಸ ಸಂಸ್ಥೆಯು ಬನವಾಸಿ, ಮುಂಡಗೋಡ ಭಾಗದ ಹಲವಾರು ಕೆರೆಗಳನ್ನು ಅಭಿವೃದ್ಧಿಪಡಿಸಿದೆ. ನೀರಿನ ಕೊರತೆಯಿಂದಾಗಿ ರೈತರು ಹಸಿವಿನಿಂದ ಬಳಲುತ್ತಿದ್ದಾರೆ. ಕೆರೆಗಳು ತುಂಬಿದ್ದರೆ ಸಮೃದ್ಧ ಕೃಷಿಯನ್ನು ಮಾಡಲು ಸಾಧ್ಯವಾಗುತ್ತದೆ. ಮನುವಿಕಾಸ ಸಂಸ್ಥೆಯು ಬರಡಾಗಿದ್ದ ಕೆರೆಯನ್ನು ಅಭಿವೃದ್ಧಿಪಡಿಸಿ ನೀರು ನಿಲ್ಲುವಂತೆ ಮಾಡಿದೆ. ಅದರೊಟ್ಟಿಗೆ ಜಾನುವಾರು ಹಾಗೂ ಕಾಡುಪ್ರಾಣಿಗಳಿಗೂ ಕೂಡ ಕುಡಿಯಲು ನೀರನ್ನು ಒದಗಿಸಿದೆ. ಮನುವಿಕಾಸ ಸಂಸ್ಥೆಯ ಕೆರೆ ಪುನರುಜ್ಜೀವನ ಕಾರ್ಯಕ್ರಮವು ಕೃಷಿಗೆ ಉತ್ತಮ ನೀರಾವರಿಯನ್ನು ಕಲ್ಪಿಸಿ ರೈತರ ಹಸಿವನ್ನು ನೀಗಿಸುವಂತೆ ಮಾಡಿದೆ ಎಂದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟ ಕಾರ್ಯಕ್ರಮದ ಪ್ರಾಸ್ತಾವಿಕ ಮಾತನಾಡಿ, ಸಂಸ್ಥೆಯು ಕೆರೆಗಳ ಪುನರುಜ್ಜೀವನ ಕಾರ್ಯಕ್ರಮವನ್ನು ಮೊದಲಿಗೆ ಬನವಾಸಿ ಭಾಗದ ಕದಂಬರ ಕಾಲದ ಐತಿಹಾಸಿಕ ಕೆರೆಗಳಾದ ಗುಡ್ನಾಪುರ, ಹಾಡಲಗಿ ಕೆರೆಗಳನ್ನ ಹೂಳೆತ್ತುವುದರ ಮೂಲಕ ಆರಂಭಿಸಿತು. ಕೆರೆಗಳಲ್ಲಿ ನೀರು ತುಂಬಿದ್ದರೆ ಸುತ್ತಲಿನ ರೈತರಿಗೆ ಕೃಷಿ ಮಾಡಲು ಅನುಕೂಲವಾಗುತ್ತದೆ ಈಗಾಗಲೇ ಸಂಸ್ಥೆಯು 340ಕ್ಕೂ ಹೆಚ್ಚಿನ ಕೆರೆಗಳನ್ನ ಅಭಿವೃದ್ಧಿಪಡಿಸಿ, 3500ಕ್ಕೂ ಅಧಿಕ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿಕೊಟ್ಟು ಸಾವಿರಾರು ರೈತರಿಗೆ ನೆರವಾಗಿದೆ. ಬೈಚಗೋಡಿನ ಕೆರೆ ಅಭಿವೃದ್ಧಿಯಿಂದಾಗಿ ಸುತ್ತಲಿನ 50 ಎಕರೆಗೂ ಅಧಿಕ ಜಮೀನಿಗೆ ನೆರವಾಗುತ್ತದೆ ಎಂದರು.

ಕ್ಲೂಬರ್ ಲುಬ್ರಿಕೇಶನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು ಸಂಸ್ಥೆಯ ಪ್ರತಿನಿಧಿಯಾಗಿ ಆಗಮಿಸಿದ ಹಾಗೂ ಸ್ಥಳೀಯರು ಆದ ಶ್ರೀಮತಿ ವಿಜಯಾ ಹೆಗಡೆಯವರು ಮಾತನಾಡಿ, ನಾನು ಶಾಲೆಗೆ ಹೋಗುವಾಗಿನಿಂದಲೂ ಈ ಕೆರೆಯಲ್ಲಿ ಸಂಪೂರ್ಣ ಹೂಳು ತುಂಬಿಕೊಂಡಿತ್ತು ಇದೀಗ ನಮ್ಮ ಸಂಸ್ಥೆಯ ಆರ್ಥಿಕ ಸಹಕಾರದೊಂದಿಗೆ ಮನುವಿಕಾಸ ಸಂಸ್ಥೆ ಕೆರೆ ಹೂಳೆತ್ತಿ ಅಭಿವೃದ್ಧಿಪಡಿಸಿದೆ. ಕೆರೆಯ ಅಂಗಳದಲ್ಲಿ ಸಮೃದ್ಧವಾಗಿ, ನೀರು ನಿಂತುಕೊಂಡಿದೆ. ಮನುವಿಕಾಸ ಸಂಸ್ಥೆಯ ಕಾರ್ಯವೈಖರಿಯನ್ನು ಶ್ಲಾಘಿಸಿ, ಕೆರೆ ಅಭಿವೃದ್ಧಿ ಕಾರ್ಯವನ್ನು ವೀಕ್ಷಿಸಿ, ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕೆರೆ ಅಭಿವೃದ್ಧಿಗೆ ಹೆಚ್ಚಿನ ಮುತುವರ್ಜಿ ವಹಿಸಿದ ಶ್ರೀಮತಿ ವಿಜಯಾ ಸುದರ್ಶನ ಹೆಗಡೆ ದಂಪತಿಗಳನ್ನು ಶಾಸಕ ಶಿವರಾಮ ಹೆಬ್ಬಾರ್ ಸನ್ಮಾನಿಸಿದರು.

ಈ ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಂಸ್ಥಾಪಕರಾದ ಹರಿಶ್ಚಂದ್ರ ಭಟ್ಟ, ಮಂಚಿಕೇರಿ ವಲಯ ಅರಣ್ಯಾಧಿಕಾರಿಗಳಾದ ಬಸವರಾಜ್ ಬೋಚಳ್ಳಿ, ಪ್ರಗತಿಪರ ರೈತರಾದ ಗುರುಪ್ರಸಾದ್ ಭಟ್ಟ, ಸಾಮಾಜಿಕ ಕಾರ್ಯಕರ್ತರಾದ ಸುಜಾತ ಸಿದ್ದಿ, ಚಂದ್ರಶೇಖರ್ ಮೊಗೆರ, ಸ್ಥಳೀಯರಾದ ಸತ್ಯನಾರಾಯಣ ಹೆಗಡೆ, ಮಂಜುನಾಥ ಮರಾಠಿ, ಬೈಚಗೋಡ ಹಾಗೂ ಸುತ್ತಲಿನ ಗ್ರಾಮದ ನಾಗರಿಕರು, ಅರಣ್ಯ ಇಲಾಖೆಯ ಸಿಬ್ಬಂದಿಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.









# ಮನುವಿಕಾಸ ಸಂಸ್ಥೆ ಮತ್ತು ಸಿಎಮ್‌ಎಸ್ ಫೌಂಡೇಶನ್‌ನಿಂದ ಮಹಿಳೆಯರಿಗೆ ಪರ್ಯಾಯ ಜೀವನೋಪಾಯ ನಿರ್ವಹಣೆಗೆ ಪ್ರೋತ್ಸಾಹ

ಮನುವಿಕಾಸ ಸಂಸ್ಥೆಯು ಗ್ರಾಮೀಣ ಸಮುದಾಯಕ್ಕಾಗಿ ಸದಾ ನಾವೀನ್ಯತೆಯುಳ್ಳ ಪ್ರಗತಿಪರ ಕಾರ್ಯಚಟುವಟಿಕೆಗಳನ್ನು ರೂಪಿಸಿ, ಅದನ್ನು ಸಕ್ರಿಯವಾಗಿ ಕಳೆದ 24 ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ. ಗ್ರಾಮೀಣ ಮಟ್ಟದಲ್ಲಿ ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ಜಾಗೃತಿಯನ್ನು ನಿರಂತರವಾಗಿ ಮೂಡಿಸುತ್ತಿದೆ.

ಸಂಸ್ಥೆಯು ಸಿಎಮ್‌ಎಸ್ ಫೌಂಡೇಶನ್ ಇವರ ಸಹಯೋಗದೊಂದಿಗೆ ಈಗಾಗಲೇ ಉತ್ತರ ಕನ್ನಡ, ಧಾರವಾಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ 26 ಮಧ್ಯಮ ಮತ್ತು ಬೃಹತ್ ಗಾತ್ರದ ಕೆರೆಗಳನ್ನು ಪುನರುಜ್ಜೀವನಗೊಳಿಸಿದೆ. ಪ್ರಸ್ತುತ ಮಹಿಳೆಯರಲ್ಲಿ ಕೃಷಿಯ ಪರಿಕಲ್ಪನೆಯನ್ನು ಜಾಗೃತಗೊಳಿಸಲು ಮತ್ತು ಅವರ ಕುಟುಂಬಗಳ ಆರ್ಥಿಕ ಜೀವನ ಮಟ್ಟವನ್ನು ಸುಧಾರಿಸಲು ಉತ್ತರ ಕನ್ನಡ ಜಿಲ್ಲೆಯ ಬನವಾಸಿ ಭಾಗದ ಆಯ್ದ 20 ಹಳ್ಳಿಗಳಲ್ಲಿ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಸುಸ್ಥಿರ ಕೃಷಿ, ಡಿಜಿಟಲ್ ಸಾಕ್ಷರತಾ ತರಬೇತಿ, ಕೇಟರಿಂಗ್ ತರಬೇತಿ, ಸುಧಾರಿತ ಹೊಲಿಗೆ ತರಬೇತಿ, ಉಚಿತ ಆರೋಗ್ಯ ತಪಾಸಣೆ ಮತ್ತು ನೈರ್ಮಲ್ಯ ಜಾಗೃತಿ ಶಿಬಿರಗಳು, ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಸಮಗ್ರ ಶಿಕ್ಷಣ ಮತ್ತು ಸಂವಹನ ಅಭಿವೃದ್ಧಿ ಕೇಂದ್ರಗಳು, ರೈತರಿಗೆ ಕೃಷಿ ಹೊಂಡ ನಿರ್ಮಾಣ, ಕೋಳಿ ಮರಿಗಳು ಮತ್ತು ಗೂಡುಗಳ ವಿತರಣೆ ಮಾಡಿ ಪರ್ಯಾಯ ಜೀವನೋಪಾಯ ನಿರ್ವಹಣೆ ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸಲು ಪ್ರೋತ್ಸಾಹ ನೀಡಿದೆ.

2025-26ನೇ ಆರ್ಥಿಕ ವರ್ಷದಲ್ಲಿ ಸಂಸ್ಥೆಯು ಸಿಎಂಎಸ್ ಫೌಂಡೇಶನ್ ಇವರ ಸಹಯೋಗದೊಂದಿಗೆ ಆಯೋಜಿಸಿದ ಕಾರ್ಯಕ್ರಮಗಳ ವಿವರ :

| **ಕ್ರ.ಸಂ** | **ಕಾರ್ಯಕ್ರಮಗಳು/ ಯೋಜನೆಗಳು** | **ಒಟ್ಟೂ ಫಲಾನುಭವಿಗಳು** |
|---|---|---|
| 1 | ಸುಸ್ಥಿರ ಕೃಷಿ ತರಬೇತಿ, ಸಾವಯವ ಗೊಬ್ಬರ, ಹಣ್ಣಿನ ಗಿಡಗಳು ಹಾಗೂ ತರಕಾರಿ ಬೀಜಗಳ ವಿತರಣೆ | 174 |
| 2 | ಡಿಜಿಟಲ್ ಸಾಕ್ಷರತಾ ತರಬೇತಿ | 1263 |
| 3 | ಕೋಳಿ ಮರಿಗಳು ಮತ್ತು ಗೂಡು ವಿತರಣೆ | 30 |
| 4 | ಕೇಟರಿಂಗ್ ತರಬೇತಿ | 95 |
| 5 | ಸುಧಾರಿತ ಹೊಲಿಗೆ ತರಬೇತಿ | 82 |
| 6 | ಕೃಷಿ ಹೊಂಡ ನಿರ್ಮಾಣ | 12 |
| 7 | ಗ್ರಾಮೀಣ ಮಕ್ಕಳಿಗೆ ಸಮಗ್ರ ಶಿಕ್ಷಣ ಮತ್ತು ಸಂವಹನ ಅಭಿವೃದ್ಧಿ ಕಲಿಕಾ ಕೇಂದ್ರ | 300 |
| 8 | ಉಚಿತ ಆರೋಗ್ಯ ತಪಾಸಣೆ ಮತ್ತು ನೈರ್ಮಲ್ಯ ಜಾಗೃತಿ ಶಿಬಿರಗಳು | 944 |
| **ಒಟ್ಟೂ ಫಲಾನುಭವಿಗಳ ಸಂಖ್ಯೆ** | | **2900** |

ಈ ಕಾರ್ಯಕ್ರಮಗಳ ಜೊತೆಗೆ 100 ಹೊಸ ಸ್ವ- ಸಹಾಯ ಸಂಘಗಳ ನಿರ್ಮಾಣ ಮಾಡಿ, 25 ಸಂಘಗಳಿಗೆ ಪಾರದರ್ಶಕ ವ್ಯವಹಾರಗಳಿಗಾಗಿ 'ಕ್ಯೂಆರ್ ಕೋಡ್'ಗಳ ವಿತರಣೆ, ವಿಮೆ ಮತ್ತು ಲಭ್ಯವಿರುವ ಸರಕಾರಿ ಸೌಲಭ್ಯಗಳನ್ನು ದೊರಕಿಸಿಕೊಡಲಾಗಿದೆ. ಇದರಿಂದಾಗಿ ಮಹಿಳೆಯರಲ್ಲಿ ಉಳಿತಾಯದ ಮತ್ತು ಬ್ಯಾಂಕ್ ವ್ಯವಹಾರಗಳ ಅರಿವು ಉಂಟಾಗಿದೆ. ಸಾಲ ಪಡೆಯುವಿಕೆ ಮತ್ತು ಮರುಪಾವತಿ, ನಾಯಕತ್ವದ ಗುಣ ಮತ್ತು ಕಿರು ಉದ್ಯಮಗಳನ್ನು ಸ್ಥಾಪಿಸಲು ಇದು ಸಹಾಯಕವಾಗಿದೆ.


CMS FOUNDATION
ಮನುವಿಕಾಸ ಸಂಸ್ಥೆ, ಕರ್ಜಗಿ
ಮತ್ತು
ಸಿ.ಎಮ್‌ಎಸ್ ಫೌಂಡೇಶನ್
AL LITRACY TRAINING FOR




CMS FOUNDATION
ಕೃಷಿ ಪೂರಕ ಪರಿಕರಗಳ ವಿತರಣೆ


CMS FOUNDATION
ಸುಸ್ಥಿರ ಕೃಷಿ ತರಬೇತಿ
SUSTAINABLE AGRICULTURE

ಸುಸ್ಥಿರ ಕೃಷಿ ತರಬೇತಿ ಪಡೆದ 174 ಮಹಿಳೆಯರಲ್ಲಿ 80% ಕ್ಕೂ ಹೆಚ್ಚು ಮಹಿಳೆಯರು ಸಾವಯವ ಕೃಷಿ ಮತ್ತು ಕೈತೋಟ ನಿರ್ಮಾಣ ಮಾಡಿ ತರಕಾರಿ ಮತ್ತು ಸೊಪ್ಪುಗಳನ್ನು ಬೆಳೆದು ಮಾರಾಟ ಮಾಡಿದ್ದಾರೆ. 50 % ಕ್ಕಿಂತ ಹೆಚ್ಚು ಮಹಿಳೆಯರು ಸಾವಯವ ಗೊಬ್ಬರ ಮತ್ತು ಬೀಜಾಮೃತ, ಜೀವಾಮೃತ ಮೊದಲಾದ ಪರಿಸರ ಪೂರಕ ಪದ್ಧತಿಗಳನ್ನು ಅನುಸರಿಸುವುದರ ಮೂಲಕ ಕಡಿಮೆ ನೀರಿನ ಬಳಕೆಯ ದಕ್ಷ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದಾರೆ. ಮಾಸಿಕವಾಗಿ 4 ರಿಂದ 5 ಸಾವಿರದವರೆಗೆ ಹೆಚ್ಚುವರಿ ಆದಾಯ ಗಳಿಸಲು ಇದು ಸಹಾಯಕವಾಗಿದೆ. ಮುಖ್ಯವಾಗಿ ಇದರಿಂದ ಆಹಾರ ಮತ್ತು ಪೌಷ್ಟಿಕಾಂಶಗಳ ಭದ್ರತೆ ಸಾಧ್ಯವಾಗಿದೆ.






ಸುಧಾರಿತ ಹೊಲಿಗೆ ಮತ್ತು ಕೇಟರಿಂಗ್ ತರಬೇತಿಗಳಿಂದಾಗಿ 177 ಗ್ರಾಮೀಣ ಮಹಿಳೆಯರಿಗೆ ಪರ್ಯಾಯ ಜೀವನೋಪಾಯ ನಿರ್ವಹಣೆಗೆ ಅನುವು ಮಾಡಿಕೊಡಲಾಗಿದ್ದು, ಹಲವು ಮಹಿಳೆಯರು ತಮ್ಮದೇ ಆದ ಹೊಸ ಹೊಲಿಗೆ ಯಂತ್ರವನ್ನು ಖರೀದಿಸುವುದರ ಜೊತೆಗೆ ಅಂಗಡಿಯನ್ನು ತೆರೆದಿದ್ದಾರೆ. ಮದುವೆ ಮತ್ತು ಖಾಸಗಿ ಸಮಾರಂಭಗಳಿಗೆ ಬಾಣಸಿಗರಾಗಿ ಹೋಗಿ ಉಪ ಆದಾಯದ ಮೂಲವನ್ನು ಕಂಡಿದ್ದಾರೆ.

ಕೃಷಿ ಹೊಂಡದ ನಿರ್ಮಾಣದಿಂದಾಗಿ ರೈತರಿಗೆ ಬೇಸಿಗೆ ಬೆಳೆಯನ್ನು ಬೆಳೆಯಲು ಮತ್ತು ತರಕಾರಿ ಬೆಳೆಗೆ ಅನುಕೂಲವಾಗಿದ್ದು ಪಶುಸಂಗೋಪನೆ ಸಹ ಸಾಧ್ಯವಾಗಿದೆ. ಕೃಷಿ ಹೊಂಡದಲ್ಲಿ ವ್ಯವಸ್ಥಿತ ಮೀನು ಸಾಕಣೆ ಮಾಡಿದ ಉದಾಹರಣೆಗಳು ಇವೆ. ವಾರ್ಷಿಕ ಆದಾಯದಲ್ಲಿ ಶೇ.40 ರಷ್ಟು ಅಧಿಕ ಇಳುವರಿಯನ್ನು ಇದರಿಂದಾಗಿ ರೈತರು ಪಡೆದಿದ್ದಾರೆ.

ಗ್ರಾಮೀಣ ಮಕ್ಕಳಿಗೆ ಸಮಗ್ರ ಶಿಕ್ಷಣ ಮತ್ತು ಸಂವಹನ ಅಭಿವೃದ್ಧಿ ಕಲಿಕಾ ಕೇಂದ್ರಗಳ ಸ್ಥಾಪನೆಯ ಮೂಲಕ 300 ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಕಲಿಕೆಗೆ ಪೂರಕವಾಗಿ ಇಂಗ್ಲೀಷ್, ಗಣಿತ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಸಂವಹನವನ್ನು ಅಭಿವೃದ್ಧಿಪಡಿಸಲಾಗಿದೆ. ಇದರಿಂದಾಗಿ ಮಕ್ಕಳಲ್ಲಿ ನಾಯಕತ್ವದ ಗುಣ ಮತ್ತು ಸ್ಪರ್ಧಾತ್ಮಕ ಮನೋಭಾವ ಅಧಿಕವಾಗಿ ಶೈಕ್ಷಣಿಕವಾಗಿ ಅವರು ಪ್ರಗತಿಯನ್ನು ಸಾಧಿಸಿದ್ದಾರೆ.










ಉಚಿತ ಆರೋಗ್ಯ ತಪಾಸಣೆ ಮತ್ತು ನೈರ್ಮಲ್ಯ ಜಾಗೃತಿ ಶಿಬಿರಗಳ ಆಯೋಜನೆಯ ಮೂಲಕ 20 ಕ್ಕೂ ಹೆಚ್ಚು ಜನರಿಗೆ ಉಚಿತವಾಗಿ ಕಣ್ಣಿನ ಪೊರೆ ಚಿಕಿತ್ಸೆಯನ್ನು ಮಾಡಿಸಲಾಗಿದೆ ಮತ್ತು ಆರೋಗ್ಯ ಸಂಬಂಧಿತ ಜಾಗೃತಿಯನ್ನು ಗ್ರಾಮೀಣ ಸಮುದಾಯಗಳಿಗೆ ನೀಡಲಾಗಿದೆ. ಒಟ್ಟಾರೆಯಾಗಿ ಈ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಸಮುದಾಯದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಉಂಟಾಗಿ ಅವರು ಸ್ವಾವಲಂಬನೆಯ ಜೀವನ ನಡೆಸಲು ಅನುವು ಮಾಡಿಕೊಡಲಾಗಿದೆ.

## ಮುಂದಿನ ಕಾರ್ಯಯೋಜನೆಗಳು

2026-27 ನೇ ಸಾಲಿನಲ್ಲಿ ಸಂಸ್ಥೆಯು 'ಜಲಕೃಷಿ ಅಭಿಯಾನ' ಯೋಜನೆಯ ಅಡಿಯಲ್ಲಿ ಕೃಷಿ ಹೊಂಡ ನಿರ್ಮಾಣ, ರೈತರ ಸಹಭಾಗಿತ್ವದೊಂದಿಗೆ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನ ಮತ್ತು ಸಮಗ್ರ ಕೃಷಿ ಪದ್ಧತಿಗಳ ಮೂಲಕ ರೈತಾಪಿ ಸಮುದಾಯದ ಆದಾಯವನ್ನು ಹೆಚ್ಚಿಸಿ ಅವರ ಆರ್ಥಿಕ ಪ್ರಗತಿಗಾಗಿ ಯೋಜನೆಗಳನ್ನು ರೂಪಿಸಿದೆ.






# ಜಲ ಕೃಷಿ ಸಮೃದ್ಧಿ ಯೋಜನೆ

## ಗ್ರಾಮೀಣ ಬದುಕಿನಲ್ಲಿ ಶಾಶ್ವತ ಬದಲಾವಣೆಯನ್ನು ತರುವತ್ತ ಮನುವಿಕಾಸದ ಹೆಜ್ಜೆ

ಕಳೆದ 23 ವರ್ಷಗಳಿಂದ ಗ್ರಾಮೀಣ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮನುವಿಕಾಸ ಸಂಸ್ಥೆ, ಕೆರೆ ಪುನರುಜ್ಜೀವನ, ಮಹಿಳಾ ಸಬಲೀಕರಣ, ಪರಿಸರ ಸಂರಕ್ಷಣೆ, ಶಿಕ್ಷಣ ಪ್ರೋತ್ಸಾಹ ಹಾಗೂ ವಿವಿಧ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸಾವಿರಾರು ಗ್ರಾಮೀಣ ಕುಟುಂಬಗಳ ಬದುಕಿನಲ್ಲಿ ಸ್ಪಷ್ಟವಾದ ಬದಲಾವಣೆಯನ್ನು ತರಲು ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಹಿಂದೆ ಸಂಸ್ಥೆಯು ಹಲವು ಜಿಲ್ಲೆಗಳಲ್ಲಿನ ಕೆರೆ ಪುನರುಜ್ಜೀವನ ಕಾರ್ಯಗಳನ್ನು ಯಶಸ್ವಿಯಾಗಿ ಕೈಗೊಂಡು, ರೈತರಿಗೆ ಸುಸ್ಥಿರ ಕೃಷಿ ಅಭಿವೃದ್ಧಿ ಕುರಿತು ತರಬೇತಿಗಳನ್ನು ನೀಡಿದೆ. ಇದೇ ಅನುಭವ ಮತ್ತು ಬದ್ಧತೆಯನ್ನು ಮುಂದುವರಿಸಿಕೊಂಡು, ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ 32 ಗ್ರಾಮಗಳಲ್ಲಿ “ಜಲ ಕೃಷಿ ಸಮೃದ್ಧಿ ಯೋಜನೆ”ಯನ್ನು ಆರಂಭಿಸಲಾಗಿದೆ.

ಕಲಘಟಗಿ ತಾಲೂಕು ಕಳೆದ ಕೆಲವು ವರ್ಷಗಳಿಂದ ಅಂತರ್ಜಲ ಮಟ್ಟ ಕುಸಿತ, ಅನಿಶ್ಚಿತ ಮಳೆಪಾತ ಹಾಗೂ ಕೃಷಿ ಆಧಾರಿತ ಜೀವನೋಪಾಯದ ಅಸ್ಥಿರತೆ ಎಂಬ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ವಿಶೇಷವಾಗಿ ಸಣ್ಣ ಮತ್ತು ಅತಿಸಣ್ಣ ರೈತರು ನೀರಿನ ಕೊರತೆ, ಕಡಿಮೆ ಕೃಷಿ ಉತ್ಪಾದನೆ ಹಾಗೂ ವಲಸೆ ಸಮಸ್ಯೆಯಿಂದ ಸಂಕಷ್ಟ ಅನುಭವಿಸುತ್ತಿರುವುದು ಕ್ಷೇತ್ರ ಅಧ್ಯಯನದಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ. ಈ ಪರಿಸ್ಥಿತಿಯನ್ನು ಮನಗಂಡ ಮನುವಿಕಾಸ ಸಂಸ್ಥೆ ಕೆರೆ ಪುನರುಜ್ಜೀವನ, ಜಲ ಸಂರಕ್ಷಣೆ, ಸಮಗ್ರ ಕೃಷಿ ಪದ್ಧತಿ (IFS), ಮಹಿಳಾ ಸಬಲೀಕರಣ ಹಾಗೂ ಉದ್ಯೋಗ ಸೃಷ್ಟಿಯನ್ನು ಒಳಗೊಂಡ ಸಮಗ್ರ ಗ್ರಾಮೀಣ ಅಭಿವೃದ್ಧಿ ಮಾದರಿಯನ್ನು ರೂಪಿಸಿದೆ. ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಗ್ರಾಮೀಣ ಜೀವನೋಪಾಯದ ಬಲವರ್ಧನೆ ಒಂದಕ್ಕೊಂದು ಪೂರಕ ಎಂಬ ನಂಬಿಕೆಯಿಂದ ಈ ಯೋಜನೆಯನ್ನು ಕಲಘಟಗಿ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.



ಈ ಯೋಜನೆಯ ಪ್ರಮುಖ ಉದ್ದೇಶವೆಂದರೆ ನೀರಿನ ಭದ್ರತೆ ಹೆಚ್ಚಿಸುವುದು, ರೈತರ ಆದಾಯವನ್ನು ವೃದ್ಧಿಸುವುದು, ಪರಿಸರ ಸಂರಕ್ಷಣೆ ಉತ್ತೇಜಿಸುವುದು ಹಾಗೂ ಗ್ರಾಮೀಣ ಸಮುದಾಯಗಳನ್ನು ಸ್ವಾವಲಂಬಿಗಳನ್ನಾಗಿ ರೂಪಿಸುವುದಾಗಿದೆ. ಈ ಯೋಜನೆಯಡಿ 15 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 32 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಯೋಜನೆಯ ಆರಂಭಿಕ ಹಂತದಲ್ಲಿಯೇ ಗ್ರಾಮ ಮಟ್ಟದ ಸಭೆಗಳನ್ನು ಆಯೋಜಿಸಿ, ರೈತರು ಮತ್ತು ಗ್ರಾಮಸ್ಥರಿಗೆ ಯೋಜನೆಯ ಉದ್ದೇಶ, ಚಟುವಟಿಕೆಗಳು ಹಾಗೂ ಅದರ ಪ್ರಯೋಜನಗಳ ಕುರಿತು ಜಾಗೃತಿ ಮೂಡಿಸಲಾಯಿತು. ಸಭೆಗಳ ಮೂಲಕ ಭೂ ಹಾಗೂ ಜಲ ಸಂರಕ್ಷಣೆ, ಕೃಷಿ ಅಭಿವೃದ್ಧಿ ಮತ್ತು ಸಮುದಾಯ ಆಧಾರಿತ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸಲಾಗಿದೆ.

ಯೋಜನೆಯಡಿ ಭೂ ಸಮತಟ್ಟು, ಬಂಡಿಂಗ್ ಮತ್ತು ಟ್ರೆಂಚ್ ಕಾಮಗಾರಿಗಳು, ಕೃಷಿ ಹೊಂಡ ನಿರ್ಮಾಣ, ಬೋರ್ವೆಲ್ ಮರುಪೂರಣ, ದೊಡ್ಡ ಮತ್ತು ಸಣ್ಣ ಕೆರೆಗಳ ಅಭಿವೃದ್ಧಿ, ಸುಸ್ಥಿರ ಕೃಷಿ ತರಬೇತಿಗಳು, ಕೈತೋಟ ಅಭಿವೃದ್ಧಿ, ಪಶು ಆರೋಗ್ಯ ತಪಾಸಣಾ ಶಿಬಿರಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳ ರಚನೆ ಮುಂತಾದ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಗ್ರಾಮ ಮಟ್ಟದ ಸಭೆಗಳನ್ನು ನಿಯಮಿತವಾಗಿ ನಡೆಸುವ ಮೂಲಕ ಸಮುದಾಯದ ಭಾಗವಹಿಸುವಿಕೆ ಮತ್ತು ಪಾರದರ್ಶಕತೆಯನ್ನು ಬಲಪಡಿಸಲಾಗುತ್ತಿದೆ. ಎಲ್ಲಾ 32 ಗ್ರಾಮಗಳಲ್ಲಿಯೂ ಗ್ರಾಮ ಮಟ್ಟದ ಸಮಿತಿಗಳನ್ನು ರಚಿಸಿ ಸ್ಥಳೀಯ ಜನರ ಸಕ್ರಿಯ ಭಾಗವಹಿಸುವಿಕೆಗೆ ಉತ್ತೇಜನ ನೀಡಲಾಗಿದೆ. ಜೊತೆಗೆ VB-G RAM G ಯೋಜನೆಯಡಿ ಕಾರ್ಮಿಕರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕಾರ್ಮಿಕ ಸಮಿತಿಗಳನ್ನೂ ರಚಿಸಲಾಗಿದೆ.

ಸೆಪ್ಟೆಂಬರ್ 2025ರಿಂದ ಆರಂಭವಾದ ಈ ಯೋಜನೆ ಕೇವಲ 8 ತಿಂಗಳ ಅವಧಿಯಲ್ಲೇ ಗಮನಾರ್ಹ ಸಾಧನೆಗಳನ್ನು ದಾಖಲಿಸಿದೆ.

| **ಕ್ರಮ ಸಂಖ್ಯೆ** | **ಚಟುವಟಿಕೆ** | **ಸಾಧನೆ** |
|---|---|---|
| 1 | ಕೃಷಿ ಹೊಂಡ ನಿರ್ಮಾಣ | 21 |
| 2 | ಭೂ ಸಮತಟ್ಟು, ಬಂಡಿಂಗ್ ಹಾಗೂ ಟ್ರೆಂಚ್ ನಿರ್ಮಾಣ | 120 |
| 3 | ಬೋರ್‌ವೆಲ್ ಮರುಪೂರಣ | 15 |
| 4 | ದೊಡ್ಡ ಕೆರೆ ಅಭಿವೃದ್ಧಿ | 6 |
| 5 | ಸಣ್ಣ ಕೆರೆ ಅಭಿವೃದ್ಧಿ | 9 |
| 6 | ಮಹಿಳಾ ಸ್ವ ಸಹಾಯ ಸಂಘಗಳ ರಚನೆ | 44 |
| 7 | ಸುಸ್ಥಿರ ಕೃಷಿ ಅಭಿವೃದ್ಧಿ ತರಬೇತಿ | 2 (121 ಫಲಾನುಭವಿಗಳು) |
| 8 | ಪಶು ಆರೋಗ್ಯ ತಪಾಸಣಾ ಶಿಬಿರ | 25 (799 ರೈತರು, 3202 ಪಶುಗಳು) |
| 9 | ಗ್ರಾಮ ಮಟ್ಟದ ಸಭೆಗಳು | 35 |
| 10 | VB-G RAM G ಸಮಿತಿಗಳ ರಚನೆ | 11 |





ಈ ಎಲ್ಲಾ ಕಾರ್ಯಗಳು ಗ್ರಾಮೀಣ ಸಮುದಾಯಗಳ ಬದುಕಿನಲ್ಲಿ ಸ್ಪಷ್ಟವಾದ ಬದಲಾವಣೆಯನ್ನು ತರಲು ಸಹಕಾರಿಯಾಗಿವೆ. ಕೃಷಿ ಹೊಂಡಗಳು ಹಾಗೂ ಬೋರ್‌ವೆಲ್ ಮರುಪೂರಣ ಕಾಮಗಾರಿಗಳು ಅಂತರ್ಜಲಮಟ್ಟ ಹೆಚ್ಚಿಸಲು ಹಾಗೂ ಕೃಷಿಗೆ ನೀರಿನ ಲಭ್ಯತೆ ಹೆಚ್ಚಿಸಲು ನೆರವಾಗಿವೆ. ಭೂ ಸಮತಟ್ಟು, ಬಂಡಿಂಗ್ ಹಾಗೂ ಟ್ರೆಂಚ್ ಕಾಮಗಾರಿಗಳು ಮಣ್ಣಿನ ಸಂರಕ್ಷಣೆ ಮತ್ತು ತೇವಾಂಶ ಉಳಿವಿಗೆ ಪ್ರಮುಖ ಪಾತ್ರವಹಿಸುತ್ತಿವೆ. ಕೆರೆ ಅಭಿವೃದ್ಧಿ ಕಾರ್ಯಗಳು ನೀರಿನ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸಿ ಕೃಷಿ ಹಾಗೂ ಪಶುಪಾಲನೆಗೆ ದೀರ್ಘಕಾಲಿಕ ಬೆಂಬಲ ಒದಗಿಸುತ್ತಿವೆ.

ಸುಸ್ಥಿರ ಕೃಷಿ ತರಬೇತಿಗಳ ಮೂಲಕ ರೈತರು ಕಡಿಮೆ ವೆಚ್ಚದ ಪರಿಸರ ಸ್ನೇಹಿ ಕೃಷಿ ಪದ್ಧತಿಗಳು ಮತ್ತು ಸಮಗ್ರ ಕೃಷಿ ವಿಧಾನಗಳ ಕುರಿತು ಅರಿವು ಪಡೆಯುತ್ತಿದ್ದಾರೆ. ಹವಾಮಾನ ಬದಲಾವಣೆಯಿಂದ ಉಂಟಾಗುವ ಸವಾಲುಗಳನ್ನು ಎದುರಿಸಲು ರೈತರು ಹೊಸ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ. ಮಹಿಳಾ ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರಲ್ಲಿ ಉಳಿತಾಯದ ಅಭ್ಯಾಸ, ಆರ್ಥಿಕ ಜಾಗೃತಿ ಹಾಗೂ ನಾಯಕತ್ವ ಗುಣಗಳು ಬೆಳೆಯುತ್ತಿವೆ. ಈ ಸಂಘಗಳು ಮಹಿಳೆಯರ ಜೀವನೋಪಾಯ ಮತ್ತು ಸಾಮಾಜಿಕ ಭಾಗವಹಿಸುವಿಕೆಯನ್ನು ಮತ್ತಷ್ಟು ಬಲಪಡಿಸುತ್ತಿವೆ.

ಪಶು ಆರೋಗ್ಯ ತಪಾಸಣಾ ಶಿಬಿರಗಳ ಮೂಲಕ ರೈತರಿಗೆ ಜಾನುವಾರಗಳ ಆರೋಗ್ಯ ನಿರ್ವಹಣೆ ಕುರಿತು ಮಾರ್ಗದರ್ಶನ ನೀಡಲಾಗುತ್ತಿದೆ. ಇದರಿಂದ ಜಾನುವಾರಗಳ ಉತ್ಪಾದಕತೆ ಹೆಚ್ಚುವುದರ ಜೊತೆಗೆ ರೋಗ ನಿಯಂತ್ರಣಕ್ಕೂ ಸಹಕಾರ ದೊರೆಯುತ್ತಿದೆ. ಒಟ್ಟಾರೆ "ಜಲ ಕೃಷಿ ಸಮೃದ್ಧಿ ಯೋಜನೆ" ಕಲಘಟಗಿ ತಾಲ್ಲೂಕಿನ ಗ್ರಾಮೀಣ ಸಮುದಾಯಗಳಲ್ಲಿ ಹೊಸ ಆಶಾಭಾವನೆಯನ್ನು ಮೂಡಿಸಿದೆ. ರೈತರು ಮತ್ತು ಗ್ರಾಮಸ್ಥರು ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದು, ಸುಸ್ಥಿರ ಕೃಷಿ ಹಾಗೂ ಪ್ರಕೃತಿ ಸಂಪನ್ಮೂಲ ಸಂರಕ್ಷಣೆಯತ್ತ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಗ್ರಾಮೀಣ ಅಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಜೀವನೋಪಾಯ ಭದ್ರತೆಯನ್ನು ಒಟ್ಟಿಗೆ ಕೊಂಡೊಯ್ಯುವ ಈ ಯೋಜನೆ, ಮುಂದಿನ ದಿನಗಳಲ್ಲಿ ಶಾಶ್ವತ ಮತ್ತು ಸ್ವಾವಲಂಬಿ ಗ್ರಾಮಗಳ ನಿರ್ಮಾಣಕ್ಕೆ ಭದ್ರ ಅಡಿಪಾಯವಾಗಲಿದೆ. ಗ್ರಾಮೀಣ ಸಮುದಾಯಗಳನ್ನು ಸ್ವಾವಲಂಬಿ ಮತ್ತು ಸುಸ್ಥಿರ ಸಮುದಾಯಗಳನ್ನಾಗಿ ರೂಪಿಸುವ ದಿಶೆಯಲ್ಲಿ ಮನುವಿಕಾಸ ತನ್ನ ಸಮಗ್ರ ಅಭಿವೃದ್ಧಿ ದೃಷ್ಟಿಕೋನದೊಂದಿಗೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.



# ಮನುವಿಕಾಸ ಮತ್ತು ಸಂಘಮಿತ್ರದ ಸಹಭಾಗಿತ್ವ - ಸಾಲ, ಡಿಜಿಟಲ್ ಹಣಕಾಸು ಸೇವೆಗಳು ಮತ್ತು ಮಹಿಳಾ ಸಬಲೀಕರಣದತ್ತ ಹೊಸ ಹೆಜ್ಜೆ

ಮನುವಿಕಾಸ ಸಂಸ್ಥೆಯು ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ, ಸ್ವಾವಲಂಬನೆ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸ್ವಸಹಾಯ ಸಂಘಗಳ ರಚನೆ, ಬಲವರ್ಧನೆ, ಹಣಕಾಸು ಸಾಕ್ಷರತೆ ಮತ್ತು ಬ್ಯಾಂಕ್ ಸಂಪರ್ಕ ಕಲ್ಪಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಈ ಪ್ರಯತ್ನಕ್ಕೆ ಮತ್ತಷ್ಟು ಬಲ ತುಂಬುವ ಉದ್ದೇಶದಿಂದ ಸಂಘಮಿತ್ರ ರೂರಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ ಸಹಯೋಗದೊಂದಿಗೆ ಸ್ವಸಹಾಯ ಸಂಘಗಳ ಸದಸ್ಯರಿಗೆ ₹10,000 ರಿಂದ ₹50,000 ದವರೆಗೆ ಪ್ರಾರಂಭಿಕ ಸಾಲ ಹಾಗೂ ₹3,00,000 ವರೆಗೆ ಸಾಲ ಸೌಲಭ್ಯವನ್ನು CIBIL ವರದಿ, ಮರುಪಾವತಿ ಸಾಮರ್ಥ್ಯ ಮತ್ತು NPA ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಒದಗಿಸಲಾಗುತ್ತಿದೆ.

ಸಾಲ ಸೌಲಭ್ಯದ ಜೊತೆಗೆ ಸದಸ್ಯರ ಸಾಮಾಜಿಕ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ ವಿಮೆ (Health Insurance) ಮತ್ತು ಜೀವ ವಿಮೆ/ಮರಣ ವಿಮೆ (Life & Death Insurance) ಸೌಲಭ್ಯಗಳನ್ನೂ ಒದಗಿಸಲಾಗುತ್ತಿದೆ. ಈ ವಿಮಾ ಯೋಜನೆಗಳು ಸದಸ್ಯರು ಹಾಗೂ ಅವರ ಕುಟುಂಬಗಳಿಗೆ ಅನಾರೋಗ್ಯ, ಆಸ್ಪತ್ರೆ ವೆಚ್ಚಗಳು ಅಥವಾ ಅಕಾಲಿಕ ಮರಣದಂತಹ ಸಂಕಷ್ಟದ ಸಂದರ್ಭಗಳಲ್ಲಿ ಆರ್ಥಿಕ ಭದ್ರತೆಯನ್ನು ಒದಗಿಸುತ್ತವೆ.

ಸದಸ್ಯರಿಗೆ ಹಣಕಾಸು ಸಾಕ್ಷರತೆ, ಸಾಲ ನಿರ್ವಹಣೆ ಮತ್ತು ಡಿಜಿಟಲ್ ವ್ಯವಹಾರಗಳ ಕುರಿತು ಹೈಬ್ರಿಡ್ ಮಾದರಿಯ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. ಸಾಲ ಪಡೆದ ಸದಸ್ಯರ ಮರುಪಾವತಿ ಪ್ರಕ್ರಿಯೆಯನ್ನು ಸುಲಭ ಮತ್ತು ಪಾರದರ್ಶಕಗೊಳಿಸಲು NACH (National Automated Clearing House) ಆಧಾರಿತ ಆನ್‌ಲೈನ್ ಕಂತು ಪಾವತಿ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಬ್ಯಾಂಕ್ ಖಾತೆಯಿಂದ ನಿಗದಿತ ದಿನಾಂಕದಂದು ಸಾಲದ ಕಂತು ಸ್ವಯಂಚಾಲಿತವಾಗಿ ಕಡಿತಗೊಳ್ಳುತ್ತದೆ. ಇದರಿಂದ ಕಂತು ಪಾವತಿಯಲ್ಲಿ ವಿಳಂಬ ಕಡಿಮೆಯಾಗುವುದರ ಜೊತೆಗೆ ಉತ್ತಮ ಸಾಲ ಶಿಸ್ತು ಬೆಳೆಯಲು ಸಹಕಾರಿಯಾಗುತ್ತದೆ. ಸದಸ್ಯರಿಗೆ ಆನ್‌ಲೈನ್ ವ್ಯವಹಾರಗಳ ಸುರಕ್ಷತೆ, ಸಮಯೋಚಿತ ಕಂತು ಪಾವತಿಯ ಮಹತ್ವ ಹಾಗೂ ಉತ್ತಮ ಕ್ರೆಡಿಟ್ ವ್ಯವಹಾರವನ್ನು ಕಾಪಾಡಿಕೊಳ್ಳುವ ಕುರಿತು ಅರಿವು ಮೂಡಿಸಲಾಗುತ್ತಿದೆ.

ಡಿಜಿಟಲ್ ಹಣಕಾಸು ಸೇವೆಗಳನ್ನು ಉತ್ತೇಜಿಸುವ ಉದ್ದೇಶದಿಂದ QR ಕೋಡ್ ಆಧಾರಿತ ಪಾವತಿ ವ್ಯವಸ್ಥೆಯನ್ನು ಪರಿಚಯಿಸಲಾಗಿದ್ದು, ಸದಸ್ಯರು ನಗದುರಹಿತ ಮತ್ತು ಸುರಕ್ಷಿತ ವ್ಯವಹಾರಗಳನ್ನು ನಡೆಸಲು ಪ್ರೋತ್ಸಾಹಿಸಲಾಗುತ್ತಿದೆ. ಇದರಿಂದ ಮಹಿಳೆಯರಲ್ಲಿ ಡಿಜಿಟಲ್ ಹಣಕಾಸು ಸೇವೆಗಳ ಬಳಕೆ ಹೆಚ್ಚುತ್ತಿದ್ದು, ಆರ್ಥಿಕ ವ್ಯವಹಾರಗಳಲ್ಲಿ ಆತ್ಮವಿಶ್ವಾಸ ವೃದ್ಧಿಯಾಗುತ್ತಿದೆ.

ಸಾಲ ಮರುಪಾವತಿಯಲ್ಲಿ ಉತ್ತಮ ಶಿಸ್ತು ಮತ್ತು ಸಮಯಪಾಲನೆಯನ್ನು ಉತ್ತೇಜಿಸಲು, ಸಾಲವನ್ನು ನಿಯಮಿತವಾಗಿ ಮರುಪಾವತಿಸಿದ ಸ್ವಸಹಾಯ ಸಂಘಗಳಿಗೆ ಸಂಘಮಿತ್ರ ರೂರಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ ವತಿಯಿಂದ ಸಾಲದ ಮೊತ್ತದ 1% ರಷ್ಟು ಪ್ರೋತ್ಸಾಹಧನ ನೀಡಲಾಗುತ್ತಿದೆ. ಈ ಪ್ರೋತ್ಸಾಹಧನವು ಸದಸ್ಯರಲ್ಲಿ ಜವಾಬ್ದಾರಿಯುತ ಹಣಕಾಸು ನಿರ್ವಹಣೆ ಮತ್ತು ಸಾಲ ಪಾವತಿಸುವ ಶಿಸ್ತನ್ನು ಬೆಳೆಸಲು ನೆರವಾಗುತ್ತಿದೆ. ಮನುವಿಕಾಸ ಸಂಸ್ಥೆ ಮತ್ತು ಸಂಘಮಿತ್ರ ರೂರಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌ನ ಈ ಸಹಭಾಗಿತ್ವವು ಕೇವಲ ಸಾಲ ಸೌಲಭ್ಯ ಒದಗಿಸುವುದಕ್ಕೆ ಸೀಮಿತವಾಗದೇ, ಡಿಜಿಟಲ್ ಹಣಕಾಸು ಸೇವೆಗಳು, ಹಣಕಾಸು ಸಾಕ್ಷರತೆ, ಸಾಮಾಜಿಕ ಭದ್ರತೆ ಹಾಗೂ ಸ್ವಾವಲಂಬಿ ಜೀವನೋಪಾಯದ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಗ್ರಾಮೀಣ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣಕ್ಕೆ ಬಲವಾದ ಅಡಿಪಾಯವನ್ನು ನಿರ್ಮಿಸುತ್ತಿದೆ.







# ನಾರಿಶಕ್ತಿ ಗ್ರೀನ್ ವೇ ಯೋಜನೆಯ ವಾರ್ಷಿಕ ವರದಿ




ಮನುವಿಕಾಸ ಸಂಸ್ಥೆಯು ಈಡಲ್ ಗಿವ್ ಫೌಂಡೇಶನ್ ಅವರ ಸಹಯೋಗದೊಂದಿಗೆ ಮಹಿಳಾ ಸಬಲೀಕರಣ, ಕೆರೆ ಅಭಿವೃದ್ಧಿ, ಜೀವನೋಪಾಯ ತರಬೇತಿ, ಕೃಷಿ ತರಬೇತಿಗಳನ್ನು ನೀಡುತ್ತಾ ಬಂದಿದೆ. ಈಗ 2024ರಿಂದ ನಾರಿಶಕ್ತಿ ಗ್ರೀನ್ ವೇ ಯೋಜನೆಯ ಅಡಿಯಲ್ಲಿ ಮಹಿಳೆಯರ ಅಭಿವೃದ್ಧಿಯ ಜೊತೆ ಯುವಕ-ಯುವತಿಯರಿಗೆ ಕೌಶಲ್ಯ ತರಬೇತಿಯನ್ನೂ ಕೂಡ ನೀಡಿದೆ. ಈ ಯೋಜನೆಯ ಕಳೆದ ಆರ್ಥಿಕ ವರ್ಷದ ಮಾಹಿತಿಯನ್ನು ಈ ಸಂಚಿಕೆಯಲ್ಲಿ ಪ್ರಸ್ತುತಪಡಿಸಿದ್ದೇವೆ.

ಮನುವಿಕಾಸ ಸಂಸ್ಥೆಯು ಈಡಲ್ ಗಿವ್ ಫೌಂಡೇಶನ್ ಅವರ ಬೆಂಬಲದೊಂದಿಗೆ ಈ ವರ್ಷ ಗ್ರಾಮೀಣ ಸಮುದಾಯಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಸಾಧನೆಯನ್ನು ಮಾಡಿದೆ. ಮಹಿಳಾ ಸಬಲೀಕರಣ, ಜೀವನೋಪಾಯ ವೃದ್ಧಿ, ಕೌಶಲ್ಯಾಭಿವೃದ್ಧಿ, ಪರಿಸರ ಸಂರಕ್ಷಣೆ ಮತ್ತು ಸ್ವ-ಸಹಾಯ ಸಂಘಗಳ ಬಲವರ್ಧನೆ ಮೂಲಕ ಸಾವಿರಾರು ಕುಟುಂಬಗಳ ಜೀವನಮಟ್ಟದಲ್ಲಿ ಬದಲಾವಣೆ ತಂದಿದೆ.

ಕಳೆದ ಆರ್ಥಿಕ ವರ್ಷದ ಪ್ರಗತಿ ಈ ಕೆಳಗಿನಂತಿದೆ. ಒಟ್ಟೂ 976 ಮಹಿಳಾ ಸದಸ್ಯರು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಮೂಲಕ ಒಟ್ಟು ರೂ. 5,69,64,968 ಸಾಲವನ್ನು ಪಡೆದಿದ್ದಾರೆ. ಈ ಹಣಕಾಸಿನ ಸಹಾಯದಿಂದ ಕೃಷಿ, ಸಣ್ಣ ಉದ್ಯಮ, ಪಶುಸಂಗೋಪನೆ ಮತ್ತು ಗೃಹಾಧಾರಿತ ವ್ಯವಹಾರಗಳಲ್ಲಿ ಹೂಡಿಕೆ ಮಾಡಿ 697 ಮಹಿಳೆಯರು ಆದಾಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಇದರಿಂದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಹೆಚ್ಚಿ ಕುಟುಂಬಗಳ ಆರ್ಥಿಕ ಸ್ಥಿರತೆ ಸಾಧ್ಯವಾಯಿತು.

ಒಟ್ಟು 1,429 ಮಹಿಳೆಯರಿಗೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಲಾಗಿದ್ದು, 236 ಮಹಿಳೆಯರಿಗೆ ಹೊಲಿಗೆ ತರಬೇತಿ ಹಾಗೂ 65 ಮಹಿಳೆಯರಿಗೆ ಸುಧಾರಿತ ಹೊಲಿಗೆ ತರಬೇತಿ ನೀಡಲಾಯಿತು. ಈ ತರಬೇತಿಗಳಿಂದ ಮಹಿಳೆಯರಿಗೆ ಸ್ವಂತ ಉದ್ಯಮ ಆರಂಭಿಸಲು ಹಾಗೂ ಉದ್ಯೋಗಾವಕಾಶಗಳನ್ನು ಪಡೆಯಲು ಅನುಕೂಲವಾಯಿತು. 112 ಮಹಿಳೆಯರಿಗೆ ಅಡುಗೆ ಮತ್ತು ಕೇಟರಿಂಗ್ ತರಬೇತಿ ನೀಡಲಾಗಿದ್ದು, ಇದು ಗ್ರಾಮೀಣ ಆಹಾರ ಸೇವಾ ಕ್ಷೇತ್ರದಲ್ಲಿ ಆದಾಯದ ಹೊಸ ಮಾರ್ಗಗಳನ್ನು ತೆರೆದಿದೆ. 735 ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿ, 141 ಮಹಿಳೆಯರಿಗೆ ಹೈನುಗಾರಿಕೆ ತರಬೇತಿ ನೀಡಲಾಗಿದ್ದು, ಕೃಷಿ ಉತ್ಪಾದನೆ ಮತ್ತು ಆದಾಯದಲ್ಲಿ ಸುಧಾರಣೆ ಕಂಡುಬಂದಿದೆ. 112 ಮಹಿಳೆಯರಿಗೆ ಬೀಜ ಮತ್ತು ಸಾವಯವ ಗೊಬ್ಬರ ವಿತರಣೆ ಮೂಲಕ ಆಹಾರ ಭದ್ರತೆ ಹಾಗೂ ಪರಿಸರ ಸ್ನೇಹಿ ಕೃಷಿಗೆ ಉತ್ತೇಜನ ನೀಡಲಾಗಿದೆ.

103 ಸ್ವಸಹಾಯ ಸಂಘಗಳ 290 ಫಲಾನುಭವಿಗಳಿಗೆ 4,350 ಮರಿಗಳನ್ನು ವಿತರಿಸುವ ಮೂಲಕ ಕೋಳಿ ಸಾಕಾಣಿಕೆಯನ್ನು ಉತ್ತೇಜಿಸಲಾಯಿತು. ಇದರಿಂದ ಕುಟುಂಬಗಳಿಗೆ ಹೆಚ್ಚುವರಿ ಆದಾಯ, ಪೌಷ್ಟಿಕಾಂಶ ಮತ್ತು ಮಹಿಳೆಯರ ಆರ್ಥಿಕ ಮಟ್ಟದಲ್ಲಿ ಹೆಚ್ಚಳ ಕಂಡುಬಂದಿದೆ.

ಯುವಜನರ ಸಬಲೀಕರಣಕ್ಕಾಗಿ ಮನುವಿಕಾಸವು ವಿವಿಧ ವೃತ್ತಿಪರ ತರಬೇತಿಗಳನ್ನು ಆಯೋಜಿಸಿತ್ತು.

| ತರಬೇತಿ | ಫಲಾನುಭವಿಗಳು |
|---|---|
| ವೀಡಿಯೋ ಎಡಿಟಿಂಗ್ | 73 |
| ಫೋಟೋಗ್ರಫಿ ಮತ್ತು ವೀಡಿಯೋಗ್ರಫಿ | 25 |
| ಪ್ಲಂಬಿಂಗ್ ಮತ್ತು ಎಲೆಕ್ಟ್ರೀಷಿಯನ್ | 54 |
| ಅಂಗಡಿ ನಿರ್ವಹಣೆ ಮತ್ತು ರಿಟೇಲ್ ಮಾರ್ಕೆಟಿಂಗ್ | 53 |
| ಅಕೌಂಟ್ಸ್ ಮತ್ತು ಕಚೇರಿ ನಿರ್ವಹಣೆ | 52 |

ಒಟ್ಟು 192 ಸ್ವಸಹಾಯ ಸಂಘಗಳ ಸ್ಥಾಪನೆಯ ಮೂಲಕ, 2,140 ಸದಸ್ಯರ ಸಬಲೀಕರಣ, 32 ಒಕ್ಕೂಟ ಸಭೆಗಳು ಮತ್ತು 2 ಮಹಿಳಾ ಸಮಾವೇಶಗಳ ಮೂಲಕ ಮಹಿಳೆಯರ ನಾಯಕತ್ವ, ಹಣಕಾಸು ಅರಿವು ಮತ್ತು ಸಮೂಹಶಕ್ತಿಯನ್ನು ಬಲಪಡಿಸಲಾಯಿತು. ಸಂಘಮಿತ್ರ ರೂರಲ್ ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್ ಮೂಲಕ 510 ಮಹಿಳೆಯರಿಗೆ ರೂ. 28,78,000 ಸಾಲ ವಿತರಿಸಲಾಯಿತು.

ವಿಕಸಿತ್ ಭಾರತ್ - ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (VB-G RAM G) ಯೋಜನೆಯಡಿ 776 ಕಾರ್ಮಿಕರಿಗೆ ಉದ್ಯೋಗ ಒದಗಿಸಲಾಯಿತು. ಇವರಲ್ಲಿ 423 ಮಹಿಳೆಯರು ಇದ್ದು, ಒಟ್ಟು 20,429 ಮಾನವ ದಿನಗಳ ಕೆಲಸ ಪೂರ್ಣಗೊಂಡು ರೂ. 75,58,730 ಕಾರ್ಮಿಕರ ಖಾತೆಗೆ ಜಮಾ ಆಗಿದ್ದು ಸಂತಸದ ಸಂಗತಿ. ಇದು ಗ್ರಾಮೀಣ ಕುಟುಂಬಗಳಿಗೆ ಆದಾಯ ಭದ್ರತೆ ನೀಡುವುದರ ಜೊತೆಗೆ ಮೂಲಸೌಕರ್ಯ ನಿರ್ಮಾಣಕ್ಕೂ ಸಹಕಾರಿಯಾಯಿತು.

ಪರಿಸರ ಸಂರಕ್ಷಣೆಯಲ್ಲಿ 16 ಕೃಷಿ ಹೊಂಡಗಳ ನಿರ್ಮಾಣದಿಂದ 18 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯ ಲಭ್ಯವಾಯಿತು. ಸಮುದಾಯ ಅರಣ್ಯ ಪ್ರದೇಶದಲ್ಲಿ 2,000 ನೀರು ತಡೆ ಘಟಕಗಳನ್ನು(ಚೆಕ್ ಡ್ಯಾಮ್) ನಿರ್ಮಿಸುವ ಮೂಲಕ ಜಲ ಸಂರಕ್ಷಣೆ, ಅಂತರ್ಜಲ ಮಟ್ಟ ಸುಧಾರಣೆ ಮತ್ತು ಪರಿಸರ ಸಮತೋಲನಕ್ಕೆ ಉತ್ತೇಜನ ನೀಡಲಾಯಿತು. ಜೊತೆಗೆ 1,087 ಸದಸ್ಯರು ಜಾಬ್ ಕಾರ್ಡ್, ಇ-ಶ್ರಮ್ ಕಾರ್ಡ್ ಸೇರಿದಂತೆ ವಿವಿಧ ಸರ್ಕಾರಿ ಯೋಜನೆಗಳ ಸೌಲಭ್ಯ ಪಡೆದುಕೊಂಡರು.

ಒಟ್ಟಾರೆ, ಮನುವಿಕಾಸ ಸಂಸ್ಥೆಯ ಕಾರ್ಯಚಟುವಟಿಕೆಗಳು ಗ್ರಾಮೀಣ ಮಹಿಳೆಯರು, ಯುವಕರು ಮತ್ತು ಹಿಂದುಳಿದ ಸಮುದಾಯಗಳ ಬದುಕನ್ನು ರೂಪಾಂತರಗೊಳಿಸಿವೆ. ಈಡಲ್ ಗಿವ್ ಫೌಂಡೇಶನ್ ಅವರ ಬೆಂಬಲದಿಂದ ಈ ಯೋಜನೆಗಳು ಕೇವಲ ಆರ್ಥಿಕ ಅಭಿವೃದ್ಧಿಯಷ್ಟೇ ಅಲ್ಲದೆ, ಸಾಮಾಜಿಕ ಗೌರವ, ಸ್ವಾವಲಂಬನೆ ಮತ್ತು ಗ್ರಾಮೀಣ ಸಮೃದ್ಧಿಗೆ ದಾರಿ ಮಾಡಿಕೊಟ್ಟಿವೆ.








**ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.**

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ)<br>ಬಾಲಚಂದ್ರ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ)<br>ಸಾಯೀಶ್ ನಾಯಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ)<br>ಪರಶುರಾಮ್ ಮಾದರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774<br>95351 68602<br>81054 33015<br>81978 87531 |
| ಸಿದ್ದಾಪುರ, ಹೊನ್ನಾವರ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಹಳಿಯಾಳ, ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ, ಶಿಗ್ಗಾಂವಿ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಹಾನಗಲ್, ಬ್ಯಾಡಗಿ, ಹಾವೇರಿ | ಅಂಬರೀಶ್ ತಿಳವಳ್ಳಿ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 76763 51078 |
| ಹೀರೆಕೆರೂರ | ಬಸವರಾಜ್ ಎಸ್ ಜಿ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 84310 52674 |
| ಹುಬ್ಬಳ್ಳಿ ಕುಂದಗೋಳ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 80953 11643 |
| ಕಾರವಾರ, ಅಂಕೋಲಾ, ಕುಮಟಾ | ನವೀನ್ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 78991 54285 |
| ಕಲಘಟಗಿ | ಸುನೀಲ್ ಪೂಜಾರ್ (ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡ ನಿರ್ಮಾಣ, ಜಮೀನು ಸಮತಟ್ಟು) | 80887 97500 |

# ಮನುವಿಕಾಸ


**ಆಡಳಿತ ಕಚೇರಿ: "ಶ್ರೀ ಮಾತಾ" ಬಿಲ್ಡಿಂಗ್, ವಿಜಯನಗರ, ತಾಲೂಕು: ಶಿರಸಿ, ಉತ್ತರ ಕನ್ನಡ, ಕರ್ನಾಟಕ - 581 401**

**ನೋಂದಾಯಿತ ಕಚೇರಿ: ಗ್ರಾಮ: ಕರ್ಜಗಿ, ಅಂಚೆ: ಬಾಳೂರು, ತಾಲೂಕು: ಸಿದ್ದಾಪುರ, ಉತ್ತರ ಕನ್ನಡ, ಕರ್ನಾಟಕ - 581 340**

**ಸಂಪರ್ಕ ಸಂಖ್ಯೆ: 98459 82552**

manuvikasa@gmail.com www.manuvikasa.org www.facebook.com/manuvikasa/